UNIVERSAL
LIBRARY

OU_200862

UNIVERSAL
LIBRARY

OSMANIA UNIVERSITY LIBRARY

Call No. K81.6 P22 M Accession No. K5536

Author

Title 1954

This book should be returned on or before the date last marked below.

ಮೊದಲನೆಯ ಮುದ್ರಣ ೧೯೪೪
ಎರಡನೆಯ ಮುದ್ರಣ ೧೯೫೪

ಬೆಲೆ : ಒಂದು ರೂಪಾಯಿ

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ಈ ಮಾಲೆಯ ಸಂಪಾದಕರು ಮತ್ತು ಪ್ರಕಾಶಕರು :
ಎಚ್. ಎಂ. ಶಂಕರನಾರಾಯಣರಾವ್, ಎಂ. ಎ.
ಕನ್ನಡ ಅಧ್ಯಾಪಕರು ಶಾರದಾವಿಲಾಸ ಕಾಲೇಜು ಮೈಸೂರು

ಮುದ್ರಕರು :
ಜಿ. ಎಚ್. ರಾಮರಾವ್, ಬಿ. ಎಸ್‌ಸಿ.
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್,
ಮೈಸೂರು

ಮುನ್ನುಡಿ

ಇದು ಭಾರತ ವರ್ಷದ ಕವಿಸಾರ್ವಭೌಮನೆಂದು ಕೀರ್ತಿತನಾಗಿರುವ ಕಾಳಿದಾಸನ 'ಮೇಘದೂತ' ಕಾವ್ಯದ ಭಾಷಾಂತರ. ಬ್ರಹ್ಮಶ್ರೀ ಪಂಡಿತ ರತ್ನಂ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿಗಳವರ 'ಕನ್ನಡ ಮೇಘಸಂದೇಶ' ವನ್ನೂ ಶ್ರೀಮಾನ್ ದತ್ತಾತ್ರೇಯ ರಾಮಚಂದ್ರ ಪೇಂಢ್ರೆಯವರ 'ಕನ್ನಡ ಮೇಘ ದೂತ' ವನ್ನೂ ಓದಿ ಸಂತೋಷಪಟ್ಟಿರುವ ನಮ್ಮ ಜನ ಈ 'ಮೇಘದೂತ' ವನ್ನೂ ಓದಿ ಸಂತೋಷಿಸುವರೆಂದು ನಂಬಿದ್ದೇನೆ.

ಕಾಳಿದಾಸನ ಕೃತಿರತ್ನಗಳ ಭಾಷಾಂತರಗಳೂ ಅವುಗಳನ್ನು ಕುರಿತ ವಿಮರ್ಶೆಗಳೂ ಎಷ್ಟೆಷ್ಟು ಹೆಚ್ಚಾಗಿ ನಮ್ಮ ಭಾಷೆಯಲ್ಲಿ ಪ್ರಕಟವಾಗುತ್ತವೆಯೋ ಅಷ್ಟಷ್ಟೂ ನಮ್ಮ ನಾಡೂ ನುಡಿಯೂ ಪ್ರವರ್ಧಮಾನಕ್ಕೆ ಬರುವುದು ಎಂದು ನಾನು ಭಾವಿಸಿದ್ದೇನೆ. ಅಲ್ಲದೆ ಕಾಳಿದಾಸನ ಎಲ್ಲ ಕೃತಿಗಳೂ ಹತ್ತು ರೀತಿಯಲ್ಲಿ ಹತ್ತು ಜನರಿಂದ ಪುನರ್ವಿತವಾಗಿ ಕನ್ನಡಕ್ಕೆ ಬರುವುದಾದರೆ, ಆ ಕವಿಕುಲ ಗುರುವಿನ ಕಲಾಕೃತಿಗಳ ರಸಗ್ರಹಣದಿಂದಾಗುವ ಆನಂದವೂ ಚಿತ್ತಸಂಸ್ಕಾರವೂ ಕನ್ನಡಿಗರಿಗೆ ಕನ್ನಡದ ಮೂಲಕವಾಗಿಯೇ ಹೊರೆಯುವುದಾದರೆ ಆ ಭಾಗ್ಯ ಬಹಳ ಹೊದ್ದದು ಎಂದು ನಮ್ಮವರು ಪರಿಗಣಿಸುವರೆಂದು ನಾನು ಆಶಿಸಿದ್ದೇನೆ.

ಈ ಕೃತಿಯ ಎರಡನೆಯ ಮುದ್ರಣವನ್ನು ತಮ್ಮ ಮಾಲೆಯಲ್ಲಿ ಪ್ರಕಾಶಪಡಿಸಿ ಮತ್ತೊಮ್ಮೆ ಕನ್ನಡಿಗರಿಗೆ ಈ ನನ್ನ ತನುಪಾವನ ಒದಗುವಂತ ಮಾಡಿದ ನನ್ನ ಪ್ರಿಯಮಿತ್ರರಾದ ಶ್ರೀ ಎಚ್. ಎಂ. ಶಂಕರನಾರಾಯಣ ರಾವ್ ಎಂ. ಎ. ಅವರಿಗೆ ತುಂಬಾ ಋಣಿಯಾಗಿದ್ದೇನೆ.

೪–೪–೫೪
ಮೈಸೂರು

ಎಸ್. ವಿ. ಪರಮೇಶ್ವರಭಟ್ಟ

ಪ್ರಕಾಶಕರ ನುಡಿ

ಹತ್ತು ವರ್ಷಗಳ ಹಿಂದೆ ಈ ಗ್ರಂಥ ಅಚ್ಚಾಗಿತ್ತು. ಇದರ ಪ್ರತಿಗಳನ್ನು ಬಯಸಿ ವಾಚಕರಿಂದ ನಮಗೆ ಪತ್ರಗಳು ಬರುತ್ತಲೇ ಇದ್ದವು. ವಾಚಕರ ಕೋರಿಕೆಯನ್ನು ಮನ್ನಿಸಿ ಈ ಗ್ರಂಥವನ್ನು ಮತ್ತೆ ಮುದ್ರಿಸಿದೆ. ಈ ಗ್ರಂಥವನ್ನು ನಮ್ಮ ಮಾಲೆಯಲ್ಲಿ ಸೇರಿಸಿಕೊಳ್ಳಲು ಅನುಮತಿಕೊಟ್ಟ ನನ್ನ ಪ್ರಿಯಮಿತ್ರರಾದ ಶ್ರೀ ಎಸ್. ವಿ. ಪರಮೇಶ್ವರಭಟ್ಟರಿಗೂ ಅತ್ಯಲ್ಪ ಕಾಲದಲ್ಲಿ ಇದನ್ನು ಅಚ್ಚಿಟ್ಟುಕೊಟ್ಟ ಪ್ರಿಯಮಿತ್ರ ಶ್ರೀ ಜಿ. ಎಚ್. ರಾಮರಾಯರಿಗೂ ನಾನು ತುಂಬ ಋಣಿ.

ಶಾರದಾಮಂದಿರ
ಮೈಸೂರು ೪–೪–೫೪

ಎಚ್.ಎಂ. ಶಂಕರನಾರಾಯಣರಾವ್
ಸಂಪಾದಕ

ಚಿ. ಸೌ. ರಾಜಲಕ್ಷ್ಮಿಗೆ

ಮೇಘದೂತನಿದನು ಮುಗಿಸಿ ತಂದಿಹೆನಿಂದು
ನನ್ನ ನಚ್ಚಿನ ನಲ್ಲೆ ನಿನಗೆ ಮುಡಿಪೆಂದು
ಸಂತಸದೊಳಿದ ಕೊಂಡು ಕೃತಕೃತ್ಯಳೆಂದೆನಿಸಿ
ಅರಳಿಸೆನ್ನೆದೆ ಹೂವನಿಂತೆ ಮನಸ್ಸೊಲಿಸಿ.

ಪೂರ್ವ ಮೇಘ

೧

ಆವನೊರುವಂ ಯಕ್ಷನವಧಾನವಿರದಂದು
ಸ್ವಾಧಿಕಾರವ ಮರೆಯೆ ಮಹಿಮೆಯಳಿದು
ತನ್ನ ಕಾಂತೆಯನಗಲಿ ವಿರಹಭಾರದಿ ಬಳಲಿ
ಭರ್ತೃಪಿನ ಶಾಪದಿಂ ವರುಷಕಾಲ
ವಾಸಗೈದಂ ಬಂದು ಜನಕನಂದನೆ ಮಿಂದ
ಪುಣ್ಯತೀರ್ಥಗಳಿರುವ ರಾಮಗಿರಿಯ
ನಿಬಿಡಮೆನೆ ನೆಳಲೀವ ತರುಗಳಾಸರೆಗಳಲಿ
ಉಚಿತಮಾದಾಶ್ರಮಂಗಳಲಿ ನೆಲಸಿ.

೨

ಅಬಲೆಯನು ತಾನಗಲಿ ಕನಕವಲಯವು ಕಳಚಿ
ಬರಿದಾದ ಮುಂಗೈಯೊಳಾ ಕಾಮಿಯು
ಅಮವೆ ಗಿರಿಯೊಳು ನೆಲಸಿ ಕೆಲವು ತಿಂಗಳು ಕಳೆದು
ಆಷಾಢ ಮಾಸದಲಿ ಮೊದಲ ದಿವಸ
ದಂತದಲಿ ದರೆಯನಗೆದೆರಚುತಿರುವಾಟದಲಿ
ತೊಡಗಿರುವ ಆನೆಯೊಲು ಕಕ್ಕೆಸೆಯುವ
ಸಾನುದೇಶವನಪ್ಪಿ ಸೊಬಗನಾಂತಿರುವೊಂದು
ಹಿರಿದಾದ ಮೋಡವನು ಕಂಡನಂದು.

೩

ಹಲವಾರು ಆಸೆಗಳ ಮನದೊಳೊಡಮೂಡಿಸುವ
ಆ ಮುಗಿಲ ಮುಂದೆನಯೊಳಿಂತೊ ನಿಂತು
ರಾಜರಾಜಾನುಚರನುರುಳಿಬಹ ಕಂಬನಿಯ
ತಡೆದಂತೆ ಬಹುಪ್ರಕ್ಕ ಚಿಂತಿಸಿದನು.
ಮೇಘದಾಲೋಕನದಿ ಸುಖಿಯಂತರಂಗಮುಂ
ಅನ್ಯಥಾವೃತ್ತಿಯನು ತಾಳ್ವುದೆನಲು
ಕೊರಳ ಬಿಗಿಯಪ್ಪುಗೆಯನಾಪಿನುವ ಪ್ರಣಯಿಜನ
ದೂರವಿರುವಂತಹರ ಸಾಡಪೆಂತು !

೪

ಶ್ರಾವಣವು ಸನ್ನಿಹಿತವೆನೆ ಬಗೆದು ಪ್ರೇಯಸಿಯ
ಜೀವಿತಾಲಂಬನಮೊಳರ್ತಿಯಾಗಿ
ತನ್ನ ಕುಶಲವನಾಕೆಗಾ ಮುಗಿಲಮೊಗದಿಂದೆ
ಕಳುಹಿಸುವ ಸಲುವಾಗಿ ಆತನಂದು
ಅದೆತಾನೆ ಅರಳಿರುವ ಕುಟಜ ಕುಸುಮಗಳಿಂದೆ
ಅರ್ಘ್ಯಮಂ ಕಲ್ಪಿಸುತೆ ಪ್ರೀತನಾಗಿ
ಪ್ರೇಮಮೊಳ್ನುಡಿಗಳಿಂದಾ ಮುಗಿಲ ತಾಂ ನುಡಿಸಿ
ಸ್ವಾಗತವ ಬಯಸಿದನು ಹರ್ಷದಿಂದೆ.

೫

ಹೊಗೆಯಿಂದೆ ಉರಿಯಿಂದೆ ಗಾಳಿನೀರುಗಳಿಂದೆ
ರೂಪುಗೊಂಡಿರುವ ಜಡಮೋಡವೆತ್ತ !
ಪಟುವಾದ ಕರಣಗಳ ಪಡೆದಿರುವ ಜೀವಿಗಳು
ಕೊಂಡೊಯ್ವ ಸಂದೇಶ ವಿಷಯವೆತ್ತ !
ಔತ್ಸುಕ್ಯದಿಂದಿವನು ಗಣಿಸದೆಯೆ ಗುಹ್ಯಕನು
ಯಾಚಿಸಿದನಾ ಮುಗಿಲ ಕೃಪಣನಾಗಿ.
ಕಾಮಾರ್ತರಾದವರು ಜೇತನಾಜೇತನವೆ
ಕೃಪಣವೆಂಬುದು ನೋಡೆ ಸಹಜಮಲ್ತೆ!

೬

ಲೋಕದೊಳು ಹೆಸರಾಂತ ಪುಷ್ಕಲಾವರ್ತಕಗ-
ಳಿಂದೊಗೆದ ವಂಶದವನೆಂದು ಬಗೆವೆ.
ಮಧುವಾನನೊಡನಿರುವ ಪ್ರಕೃತಿಪುರುಷನುಮೆಂದು
ಕಾಮರೂಪಿಯುಮೆಂದು ನಿನ್ನನರಿವೆ.
ವಿಧಿವಶದೊಳಿಂದಂತ ಬಂಧು ದೂರದೊಳಿರುವ
ನಾಂ ನಿನ್ನನೀತರದಿ ಬೇಡುತಿರುವೆ.
ಅಧಿಗುಣರ ಬೇಡುವುದು ಸಿಫಲವಾದರದೇನು
ಅಧಮರೀವುದಕಿಂತ ಬೇಸೆನಿಸದೆ!

೭

ಸಂತಸ್ತರಾದರಿಗೆ ನೀನೆ ಶರಣಾಗಿರುವೆ
ಹೇ ಪಯೋದನೆ ಅಂತೆ ನಿನ್ನನೆರೆವೆ.
ಧನವತಿಯ ಕೋಪದಿಂದಗಲಿ ಒಂದಿರುವೆನ್ನ
ಸಂದೇಶನಿಸನೊಯ್ದು ಸ್ತ್ರಿಯೆಗೆ ತಿಳಿಸು.
ಅಲ್ಲಿ ಬಹಿರುಸವನದಿ ಸೆಲೆನಿಂದ ಪರಶಿವನ
ಶಿರದ ಶಶಿಕಳೆಯ ಬೆಳ್ದಿಂಗಳಿಂದೆ
ಹೊಳೆವ ಹರ್ಮ್ಯಗಳಿರುವ ಯಕ್ಷರೊಡೆಯನು ವಸಿಪ
ಹೆಸರಾದ ಅಲಕೆಯನು ಕುರಿತು ತೆರಳು.

೮

ಪಥಿಕನನಿಗೆಯಗೆಲ್ಲ ಪತಿಗಳೈತಹರೆಂದು
ವಿಶ್ವಾಸದಿಂದಂದು ನಲಿದು ನಿಂದು,
ಮುಂಗುರುಳ ಮೇಲೆತ್ತಿ ಸಡಗರದೆ ನೋಡುವರು
ಸವನಸದನಿಯನೇರಿ ಬರುವ ನಿನ್ನಂ.
ಸಖನೆ ನೀಂ ಮೈದೋರೆ ಪೆರನಾವನೆನ್ನವೊಲು
ತಾನನ್ಯರಾಳಾಗಿ ಬಾಳದವನು
ನೆಮ್ಮದಿಯೊಳಿರುವಂದು ವಿರಹವಿಧುರೆಯ ಸತಿಯ
ಬರಿದೆ ತಾಂ ಕಡೆಗಣಿಸಲೆಂತಾರ್ಹನೊ!

೯

ಅನುಕೂಲ ಮಾರುತನು ಮಂದನುಂದಂ ಸುಳಿದು
ನಿನ್ನ ನೂಗಿಸುತಿರುವನಂದದಿಂದೆ.
ಬಿಂಕದಲಿ ಚಾತಕವು ನಿನ್ನ ಎಡನಂಕದಲಿ
ವನಿಗೈಯುತಿಪ್ಪುದೊಲಿದು ಮಧುರಮಾಗಿ.
ಬಸುರಿನೊಸಗೆಯ ನೊಗವ ಪರಿಚಯದೊಳಂದದಿಂ-
ದಾಗಸವೆ ನಿಡುಸರವ ತೋರಣಮೊಲು
ಹಾರುವ ಬಲಾಕಗಳು ನಯನ ಸುಭಗನೆ ನಿನ್ನ-
ನನುಸರಿಸಿ ಸೇವಿಸುತೆ ನಲಿವುವಲ್ತೆ!

೧೦

ದಿನದಿನಗಳೆಣಿಕೆಯೊಳೆ ನಿರತಳಾಗಿರುವನಳ
ಏಕಪತ್ನಿಯ ನತಿಯನವಿಸನ್ನೆಯ
ಭ್ರಾತೃಜಾಯೆಯನವಳ ನೀನವಶ್ಯಂ ಸಖನೆ
ತ್ವರಿತಗಮನದೊಳೈದಿ ನೋಡಲಿರುವೆ.
ಕುಸುಮಕೋಮಲಳೆನಿಸಿ ವಿರಹದೊಳು ಬಲುಬಳಲಿ
ಕ್ಷಣಮಾತ್ರದಲಿ ಕಳಚಿ ಬೀಳಲಿರುವ
ಪ್ರಣಯಿಹೃದಯನನವನು ಆನಯೆನುವಾ ಬಂಧ
ವಿಸ್ರಯೋಗದೊಳಿರವೆ ತಡೆದಿರುವುದು.

೧೧

ನಿನ್ನ ಮೊಳಗುಗಳಿಂದೆ ಮುಖಿಯೊಳೊಗೆಯೆ ಶೀತಾಂಶ್ರ
ಬೆಳೆಬರುವ ಧರೆ ಮೆರೆದವಂಶ್ಯಯೆನಿಸಿ
ಕೇಳಲಿನಿಯಹ ನಿನ್ನ ಮೊಳಗನವನಾಲಿಸುತೆ
ಮಾನಸ ಸರೋವರವ ಪುಗಲೆಳಸುತೆ
ತಾವರೆಯ ಚಿಗುರಲೆಯ ಪಾಥೇಯಗಳನಾಂತು
ರಾಜಹಂಸ ಸಮೂಹ ನಭಮೊಳಂತೆ
ಕೈಲಾಸವಲ್ಲಿನರಮೊಲಿದು ನಿನ್ನೊಡಗೂಡಿ
ಜೊತೆಯ ದಾರಿಗರಾಗಿ ನೆರವೀವ್ರವ್ರ.

೧೨

ಲೋಕವಂದಿತನಾದ ರಾವಣವಿಜಾವರೆಯ
ಗುರುತಿರುವ ಸಾನುಗಳನಾಂತು ಮೆರೆದು
ನಿನ್ನ ಪ್ರಿಯಸಖನಾಗಿ ಬಂನ್ನಿಜೋನ್ನತನಾಗಿ
ನಿಂದ ಗಿರಿಯಿದನ್ಪ್ಪ ೀ ತರಳ.
ಕಾಲಕಾಲಕೆ ನಿನ್ನ ಸಂಯೋಗವನು ಪಡೆದು
ಚಿರವಿರಹದಿಂಪೂಗೆದ ಕಂಬನಿಯನು
ನಿನಗಾಗಿ ಕಾತರವೆ ಬೆಟ್ಟವಾಗ್ದಿಸಿ ಸುರಿಸಿ
ತನ್ನ ಸ್ನೇಹವನುಸಿಂತು ತೋರುತಿಹುದು.

೧೩

ನಿನ್ನ ಪಯಣದ ಮಾರ್ಗಸಂತಿರುಳ್ಪವೆಂಬುದನು
ಸಂಪೂರ್ಣವೆನಿಸಿರನೆ ಕೀಳು ಜಲದ!
ಬಳಿಕ ನವನೊಗುನಂ ಸಂತೋಷದನು ತೀರ್ಸ್ಸಿ–
ನನನು ಕಿವಿಗೊಂಟ್ಟಾಲಿಸನ್ನ ಸುಸರೆ!
ಬಳಿಕ ನೀಂ ದಾರಿ ನವೆ ಬಂಬಂಲ ಬಸವಳಿಯೆ
ಗಿರಿಯಿರವೆಡೆಗಳಲ ಪವನನೂರು,
ಕಡುದೀನನಾವಂದು ನಿರ್ಝರ ಸ್ರೋತಗಳ
ನಿರ್ಮಲೋದಕಗಳಂ ಪಾನಗೈದು.

೧೪

ಪರ್ವತಶೃಂಗವನೆ ನವನನ ನಡೆಯಿಸುತಿರ-
ನೆಂವಣೆಸಿ ನಿನ್ನ ಮುಗ್ಧಾಂಗನೆಯರು
ಚಕಿತ ಚಕಿತೆಯರಾಗಿ ಪೊಗವೆಳ್ತ್ತ ತೋಡುತರೆ
ವೀಕ್ಷಣೋತ್ಸಾಹವನು ಮೆರೆಸಗೊಂಡು
ಮಾರ್ಗದೊಳು ಸಂಧಿಸುವ ತೋರ ಯುವ್ಮಾಗಳ
ಪಸ್ತಾವನೀಪಗಳ ಬಿಂಪಿಸುತೆ
ಸರಸ ನಿಮುಷಗಳೆರುವ ಈ ತಾಣದಿಂದೆ ನೀಂ
ಮುಂಮತ್ತರಾಭಿಮುಖಯಾಗಿ ತರಳ!

✱

೧೫

ವಿವಿಧ ಮಣಿರತ್ನಗಳ ಕಾಂತಿ ಸಮ್ಮಿಶ್ರಣದೆ
ಬೆಳೆವ ದೇವೇಂದ್ರಧನು ಕಣ್ಗೊಳಿಸುತೆ
ನಿನ್ನ ಮೈತೊಡನೆನಿಸಿ ಮುಂಗಡೆಯ ಹುತ್ತದಿಂ-
ದೊಡನೂಡಿ ನಿಂದಂದು ಸೊಬಗಿನಿಂದೆ
ಸ್ಫುರಿತ ಕಾಂತಿಯನಾಂತ ನವಿಲುಗರಿಗಳ ತಳೆದು
ಶೋಭಿಸುವ ಗೋಪಾಲಕೃಷ್ಣನಂತೆ
ನೀಲಿಬಣ್ಣದ ನಿನ್ನ ತನುವಪರ ಕಾಂತಿಯಲಿ
ಮಿಗಿಲಾದ ಶೋಭೆಯಿಂದೆಸೆಯುತಿಹುದು!

೧೬

ಭ್ರೂವಿಲಾಸಂಗಳಲಿ ಅನಭಿಜ್ಞರೆನಿಸಿರುವ
ಜಾನಪದವಧುಗಳಾನಂದದಿಂದೆ
ಪ್ರೀತಿ ತುಂಬಿದ ತನ್ನ ಲೋಚನಂಗಳ ತೆರೆದು
ನೀನೆ ಕೃಷಿಗಾಧಾರನೆಂದು ಬಗೆದು
ಕಾತರದೆ ಸೋಪರವನಾಸ್ವಾದನಂಗೈದು
ಅವೆ ಉತ್ತ ಹೊಲದ ನರುಗಂಪನುಗುವ
ಮೂಲಮನ್ನೇರಿ ನಸುಪಡುವಲಿಗೆ ನೀಂ ಪ್ರೇಗಿ
ತಿರುಗಿ ತೆರಕುತ್ತರಕೆ ತೀವ್ರಮಾಗಿ.

೧೭

ಜಲಧಾನಿಗಳ ಸುರಿಸಿ ಕಾಳ್ಕಿಚ್ಚನುಪಶಮಿಸಿ
ಎಸಗಿದುಪಕಾರದಿಂದಾಮ್ರಕೂಟ
ದಾರಿ ನನೆದಾಯಸದ ಬಳಲಿರುವ ನಿನ್ನ ತಾಂ
ತವಿವುವೈ ತಲೆಮೇಲೆ ಸೊಗಸಿನಿಂದೆ.
ಕ್ಷುದ್ರನಾವಾತನುಂ ಆಶ್ರಯವನಾತಿನುವ
ಗೆಳೆಯನೈತರುವಂಮ ತನ್ನ ಬಳಿಗೆ
ಅವನ ಉಪಕಾರಗಳ ನೆನೆಮ ಮೊಗದಿರುಹನೆನೆ
ಉನ್ನತರ ಬಗೆಯನಿನ್ನೆಂತು ಪೇಳ್ವೆಂ!

೧೮

ಕಳವಣ್ಗಳಿವಿರುವ ಕಾನನಾವ್ಯಗಳಿಂದೆ
ಕವಿದ ಪಾಸುಗಳಿರುವ ಅಮ್ಮಕೂಟ
ತೈಲದಿಂ ನುಪ್ಪೆವ ನೇಗೆಯೋಲಿವ ನೀನು
ಅವರ ವಿಷಯಾಗ್ರಹನು ಸರಿಯಂತು
ನಡುವೆ ಕಪ್ಪಾಗದುಕೆ ಮುಂಕೆಲ್ಲ ಬೆಳ್ಪಿನೆವ
ತಿಪನೆಣ್ಣ ಕೋರಮೊ ವಿವೇಗನಂ
ಅಮರಪಂಪತಿಗಳಂವಾ ಪೀಕವಾ ರ್ತಿನೆ
ಕೋಣಿಸುವೆ ನೋಡಲಿ ಸುಗಸೆನಿಸಿ.

೧೯

ವನಚರವಧೂಜನಗಳಂ ರಲೆ ವಿಸರಿಸುವ
ವನ್ಯಕುಂಜಗಳಿವೆಂ ಲಿರು ನೀನು
ನೀರು ಬರಿದಾಗಲು ಬೇಗಬೇಗನೆ ಸಾಗ
ಅನಾಜೆ ದಾರಿಯನು ದಾಟಿಸಂತು
ಮಾತಂಗನಂಗಳೊಂ ಸರಜಿಂ ಚಿತ್ರರ
ಭಸ್ಮಾವಳಿಯ ಹೊಲುಬರುತೆ
ಹಳ್ಳದಿಣ್ಣೆಗಳಿರುವ ವಿಂಧ್ಯಾವನಿಯ ಬಾಗಿ
ಪಸರಿಸಿಪ ನರ್ಮದೆಯ ನೋಡಲರುವೆ.

೨೦

ಮಳೆಗರೆದು ಬರಿದಾಗಿ ಹೊಂಬೆ ನೀರ್ ಕುಡಿನಾವ
ವನಗಜದ ಮದಜಲದಿ ಪರಿಮಳಿಸುತೆ
ನೀರಳಿಯ ನೆಲೆಯಿಂದೆ ಮುಂದಗವನನುಸಾಂತ
ನರ್ಮದೆಯ ತೋಯವನು ಮೊಗೆದು ಕೆರಳು.
ಇಂತು ಅಂತರ್ವಾಹಿನಿಯ ಸಿನ್ಧುನ ಸಿನೆ
ಚಲಿಸಲಸಿಲನು ರಕ್ತನಾಗನಸ್ತಿ !
ಪೂರ್ಣತೆಯೆ ಗೌರವಕೆ ಕಾರಣಾತ್ಮ ; ರಿಕ್ತತೆಯ
ದೆಸೆಯಿಂದೆ ಸರ್ವಮುಂ ಲಘುವೆನಿಸಿಪುದು.

೨೧

ಅರೆಬೆಳೆದ ಕೇಸರದೆ ಕಂದುಹಸುರಿನಬಣ್ಣ
ದಿಂದೆಸೆವ ನೀಪಗಳ ನೋಡಿ ಸವಿದು
ಜೌಗುನೆಲದಲಿ ಬೆಳೆದ ಮೊಗಲುಮುಗುಳುಗಳೊಗೆದ
ಎಳೆಯ ಕಂದಳಿಗಳನು ತಿಂದು ನಲಿದು
ವರ್ಷಾಕಾಲಗಳಿಂದಲಧಿಕ ಸೌರಭವುಗುವ
ನೀರುಂಡ ತೆರೆದು ಹೊಸಕಂಪು ಮೂಸಿ
ಸಂಚರಿಪ ಸಾರಂಗ ನಿವಹ ತಾಂ ಸೂಚಿಸುದು
ಹೊಸನೀರ ಹಸಿಗನೆವ ನಿನ್ನ ಪಥಮಂ.

೨೨

ನೀರ್ವನಿಯ ಬಿಡಿಪೊಂದು ಚತುರತೆಯನಾಂತಿರುವ
ಚಾತಕಂಗಳ ನೋಡಲೆಳಸಿದಂದು
ಪಂಕ್ತಿಪಂಕ್ತಿಯೊಳೆನೆದು ಹಾರುವ ಬಲಾಕಗಳ
ನೊಂದೆರಡು ಎಂದೆಣಿಸಿ ತೋರಲೆಂದು
ರಮಣಿಯರಸೊಡಗೂಡಿ ಸಿದ್ಧರಾಗಸರೊಳಿರೆ
ಮೇಲೆ ನೀಂ ಮೊಗಮೋರಿ ಗುಡುಗಿನಂದು
ಸೋತ್ಕಂಠ ಸಹಚರಿಯರಾಲಿಂಗನಂ ಪಡೆದು
ನಿನ್ನನಭಿನಂದಿಸುವರಂದದಿಂದೆ.

೨೩

ನನ್ನ ಮನದಿನಿಯನು ಸಂತವಿಪ ಸಲುವಾಗಿ
ಸಡಗರವೆ ನೀಂ ಪ್ರೇಗಲೆಳಸಿದಂದು
ಮಲ್ಲಿಗೆಯ ಕಂಪುಗುವ ಮಲೆಮಲೆಗಳೆಡೆಗಳಲಿ
ಬರಿವೆ ಕಾಲವ ಕಳೆವೆಯೆಂದು ಬಗೆವೆ.
ಕಣ್ತುಂಬಿ ಸೂಸುತಿರುವಾನಂದಬಾಷ್ಪದಿಂ
ಕೇಕಾರವಂಗೈದು ಸ್ವಾಗತಿಸುವ
ನವಿಲುಗಳ ಆತಿಥ್ಯವನು ಪಡೆದು ಮೇಣ್ಕೊ
ಮ್ಮತಗತಿಯೊಳಲ್ಲಿಂದೆ ತೆರಳಲೆಳಸು.

೨೫

ಹೊನೆಸೊರೆಯು ಪಸಿವಿರಿನ ಕೇದಗೆಯು ಗರಿಗಳಿಂ
ಬೆಳ್ಪಂತ ಬನವನನ ಬೇಲಿಯಿಂದೆ
ಗೃಹಬಲದ ಸಂಪದನ ಸಕ್ಷಿಸಂಕುಲವೊಲಿಮ
ಗೂಡುಗಳ ಶ್ರೇತಲಿರುವ ಮರಗಳಿಂದೆ
ನೀಲಿಬಣ್ಣಸುಧಾಂತ ಕಾವ್ಯಗೀಯುವ
ಕರಮೆಸೆವ ಸೇಲಳಿರು ಬನಗಳಿಂದೆ
ಕೆಲದಿನವೆ ತಂಗಿರುವ ಸಂಪನಪಗಳಂದ
ದಾಪಾಣ್ಯದೇಶ ಸುಂದಸಿನ್ನವಲ್ಲ.

೨೬

ಲೋಕಸೊಳು ಪೆಸರಾದ ವಿದ್ಯಾಧ ನದಾ
ರಾಜಧಾನಿಯೆನನನು ನೀ ನೀನು
ಭ್ರೂಭಂಗವತಿರುವ ಚಲಸುವ ಪಿಗಳಿಸಿಸಿಮ
ಅಧರವಂಚಿದಾಗ ಜಲವ ತಳೆದು
ಮೆಸೆವ ವೇತ್ರಾನಚಯಸಿರವ ಸುಟಿಸುವವೋಲು
ನಸುಬಾಗಿ ವ್ಯಮನಮಧುರ ಸೊಗಸಿಂದೆ
ದಡವೆಜೆಯೊಳಿರವರ ನವಿಲುಗಳಕನನು ಕುಟಿನೆಂದು
ಕಾಮುಕನ ಸಂಸ್ತೂರ್ಣ ಸ್ಥಲವ ತಡೆನೆ.

೨೭

ಪಣ್ಯವನಿತಾಜನರ ಸುರತ ಶ್ರಮಜಲಮುಗುನ
ಮುಂದರ ಲೀಲಾನೇತ್ಯಸಿವಂದಿಂದ
ನಾಗರಿಕರುದ್ಯಾನ ಯಶೌನಸೋತ್ಸರ್ಗನನು
ಆವ ಪರ್ವತ ಜನಕ ಸಾಪಿತಿಯೊ
ಪ್ರೌಢಪುಷ್ಪಗಳಿಸಿನ ಸೀಸನ್ಮಕ್ಷಗಳಿಂದ-
ಲಾವ ಪರ್ವತ ಜನರ ನುನನಳಿಯುತೆ
ನಿನ್ನ ನಂಸ್ಪರ್ಶವಲಿ ಸ್ಪರ್ಧಕಗೊಂಡವೊಲಿಯೊ
ಅಮವೆ ನೀಚ್ಛೈರ್ಗಿರಿಯೊಳಲ್ಲ ನೆಲಸು.

೨೭

ಬಳಿಕ ಮುಂದುತ್ತರಿಸಿ ವನನದೀತೀರದೊಳು
ಉಪವನದ ಮಲ್ಲಿಗೆಯ ಮೊಗ್ಗೆಗಳಿಗೆ
ಹೊಸಮಳೆಯ ನೀರ್ವನಿಗಳಭಿಷೇಚನಂಗೈದು
ಬೆಮರಿಳಿವ ಕದಪುಗಳನೊರಸುವಂದು
ಕೆವಿಯ ನೈದಿಲೆ ಹೂವು ಬಾಡಿ ಕೆಳಗುಸುರುತಿರೆ
ಪೂದಿರಿಯುವಬಲೆಯರ ಮೊಗದ ಮೇಲೆ
ಕ್ಷಣ ಮಾತ್ರ ಪರಿಚಯದ ನೆರಳಿನಾಸರೆಯಾಗಿ
ಮತ್ತ ಮುಂದುತ್ತರಕೆ ತೆರಳು ಸಖನೆ.

೨೮

ಉತ್ತರದ ದನೆಗೆಂದು ಪಯಣ ಬೆಳೆಸುವ ನಿನಗೆ
ಉಜ್ಜಯಿನಿಯಾ ದಾರಿ ಬಳಸಾವರುಂ
ಅಲ್ಲಿನ ಮಹೋತ್ತುಂಗ ಸೌಧವರಮನೆಗಳಲಿ
ಸ್ನೇಹವಿರಹಿತನೆನಿಸಿ ಮೊಗದಿರುಹದ
ಬಳ್ಳಿಮಿಂಚಿನ ಬೆಳಗಿಗಿರವೆ ಭಯದಿಂ ಬೆದರಿ
ಚಲಿಸುತಿರುವಾ ನಗರದಂಗನೆಯರ
ಚಕಿತ ಲೋಲಾಪಾಂಗ ಲೋಚನಂಗಳ ನೋಡಿ
ನೀನಲ್ಲಿ ರಮಿಸದಿರೆ ವಂಚಿತನಹೆ.

೨೯

ಅಲೆಗಳುಲ್ಲೋಲವಲಿ ಕಲರವಂಗೈಯುತಿಪ
ಹಕ್ಕಿಗಳ ಸಾಲಿನೊಡ್ಯಾಣದಿಂದೆ
ಧುಮುಧುಮುಕಿ ಸರಿನಂಮ ಸುಭಗಮೆನೆ ತೋರುತಿಹ
ಆವರ್ತವೆನುವ ಸುಳಿನಾಭಿಯಿಂದೆ
ಮೆರೆವ ನಿರ್ವಿಂಧ್ಯೆಯನು ಬಳಸಾರ್ದು ಸಂತಸದೆ
ಅಲ್ಲಿ ರಸಲೋಲನೆನೆ ಸುಖಿಸು ಸಖನೆ
ವನಿತೆಯರಿಗಿನಿಯರೊಳು ಒಲವ ಜೇಡುವವರಲಿ
ವಿಲಸನವೆ ತಾನಲ್ತೆ ಮೊದಲ ನುಡಿಯು.

೩೦

ವೇಣಿವೊಲು ತೆಳುವಾಗಿ ಹರಿವ ನೀರ್ವೊನಲಿಂದೆ
ಕೃಶಳಾಗಿ ತೋರುವಾ ನಿರ್ವಿಂಧ್ಯೆಯು
ದಡವೆಡೆಯ ತರುಗಳಿಂದುದುರಿ ಬೀಳುತಲಿರುವ
ಹಣ್ಣೆಲೆಗಳಿಂದೆ ತಾಂ ಬೆಳ್ಪನಾಂತು
ತನ್ನ ವಿರಹವ್ಯಥೆಯ ದಾರುಣಾವಸ್ಥೆಯಲಿ
ನಿನ್ನ ಸೌಭಾಗ್ಯವನೆ ಸೂಚಿಸುತಿರೆ
ಸಂಗಮದ ಸೊಗದಿಂದಲಾ ಸಿಂಧು ಮೈತುಂಬು-
ವಂದದೊಳು ನೀನವಳ ಪೋದಗೊಳಿಸು.

೩೧

ವತ್ಸರಾಜನ ಕಥೆಯನರಿತ ಕೋವಿದರಿರುವ
ಊರ ಹಿರಿಯರ ನೆಲೆಯನಾವಂತಿಯ
ಹಿಂದಿರಿಸಿ ಸಿರಿಯ ಸರಹಿನ ನೆಲೆಯು ತಾನೆನುವ
ಉಜ್ಜಯಿನಿಯನು ಕುರಿತು ತೆರಳೆ ಮುಂದೆ
ತಮ್ಮ ಸುಚರಿತ ಫಲವು ಮುಗಿದು ಬರುತಿರುವಂದು
ದೇವಲೋಕದ ಜನರು ತಿರುಗಿ ಬಂದು
ಸುಕೃತ ಶೇಷಗಳಿಂದ ಧರೆಗೆ ತಂದಿಳಿಸಿರುವ
ದಿವದೊಂದು ಖಂಡವೆಂದೆ ಕಂಗೊಳಿಪುದು.

೩೨

ಅಲ್ಲಿ ಶಿಪ್ರಾನದಿಯ ಮೇಲೆ ಬೀಸುವ ಗಾಳಿ
ಉದಯಕಾಲದೊಳುಲಿವ ಸಾರಸಗಳ
ಮದಕಲದ ಕೂಜಿತವ ನಿಡಿದಾಗಿ ಬೆಳೆಯಿಸುತೆ
ಬಿರಿದ ತಾವರೆಯರಳ ಕಂಪನಾಂತು
ಭೋಗದಭಿಲಾಷೆಯಲಿ ಚಾಟುವಚನವ ನುಡಿದು
ಕಾಮಿನಿಯ ಸಂತಪಿಸುವಿನಿಯನಂತೆ
ಅಂಗನೆಯರೊಡಲಿಗನುಕೂಲ ಭಾವದಿ ಸುಳಿದು
ಜೇಟದಾಯಾಸವನು ನೀಗಲಿಹುದು.

೧೧

೩೩

ತಾರಹಾರಗಳೆನಿತೊ ತರಳ ಘುಟಿಕಗಳೆನಿತೊ
ಶಂಖ ಶುಕ್ತಿಗಳೆನಿತೊ ಕೋಟಿ ಕೋಟಿ
ಎಳೆಹುಲ್ಲಿನಂತಿರುವ ಹಸುರುಬಣ್ಣದ ಕಾಂತಿ
ಕುಡಿಯೊಡೆದು ಹೊಳೆವ ಮರಕತಗಳೆನಿತೊ!
ಹವಳಗಳ ಪರಳೆನಿತೊ ಉಜ್ಜಯಿನಿಯಂಗಡಿಯ
ಬೀದಿಗಳ ನೋಡಿದರೆ ಹೊಳೆವುದಂದು
ಮುನ್ನೀರು ತನ್ನೆಲ್ಲ ರತ್ನಗಳನಿಲ್ಲಿರಿಸಿ
ತಾಂ ಬರಿಯ ನೀರನಿಧಿಯಾದುದೆಂದು.

೩೪

ಇದುವೆ ತಾಣದೊಳಂದು ಪ್ರಮ್ಲೋತವುತ್ರಿಯನು
ಬಂದು ಅಪಹರಿಸಿದನು ವತ್ಸರಾಜಂ
ಮೇಣಿದುವೆ ತಾಣದಲಿ ಅನಲೇಂದ್ರನೆನಿಸುವ
ಹೇಮತಾಳದ್ರುಮವ ವನಮಿರ್ದುದು
ಮತ್ತಿದುವೆ ತಾಣದಲಿ ನಲಗಿರಿಯು ಮದವೇರಿ
ಕಂಬವನು ಕಿತ್ತೆನೆದು ಹಾರಾಡಿತು
ಈ ತೆರನ ಕತೆಗಳನು ಹೇಳುತ್ತ ಬಲ್ಲ ಜನ-
ರಾಗಂತುಕರನಲ್ಲಿ ಮುದಗೊಳಿಪರು.

೩೫

ಎಲೆಹಸುರು ಬಣ್ಣದಲಿ ದಿನಕರನ ತೇಜಿಗಳ
ಹೋಲುತಿಹ ವಾಪಕಗಳಿರುವುವಲ್ಲಿ
ಶೈಲದಂತುತ್ತುಂಗಮೆನಿಸಿದಾನೆಗಳಲ್ಲಿ
ನಿನ್ನವೊಲು ಮದಜಲವ ಮಳೆಗರೆವುವು.
ಸಮರ ಸಂರಂಭದಲಿ ದಶಮುಖನಿಗೆದುರಾಗಿ
ಚಂದ್ರಹಾಸವೊಳಾವ ಕಲೆಗಳಿಂದೆ
ಆಭರಣಕಾಂತಿಗಳ ಮರೆಸಿ ಮೆರೆವಂತಿರುವ
ಯೋಧಾಗ್ರಗಣ್ಯರಿಪರಲ್ಲಿ ನೆಲಸಿ.

೩೬

ಜಾಲಮಾರ್ಗದಿನೊಗೆವ ಕೇಶಸಂಸ್ಕಾರದಿನಿ
ಧೂಪದಿಂಮೊಡಗೂಡಿ ಪುಷ್ಪನಾಗಿ
ಬಂಧುವೆನುವಾದರದೆ ಗೃಹಮಯೂರಗಳೀವ
ನೈಸ್ತೋಪಹಾರದಿಂ ತುಷ್ಟನಾಗಿ
ಕುಸುಮ ಸೌರಭವುಗುಳ ಲಲಿತವನಿತಾಪಾದ
ರಾಗಾಂಕಿತಂಗಳಿಪ ಹರ್ಮ್ಯಗಳಲಿ
ಉಜ್ಜಯಿನಿಯೈಶ್ವರ್ಯ ಲಕ್ಷ್ಮಿಯನು ನೋಡುತ್ತೆ
ದಾರಿ ನವೆದಾಯಸವ ನೀಗಲಿರುವೆ.

೩೭

ಭರ್ತೃವಿನ ಕಂಠಮೊಲು ಭವಿಯಾಂತನಿವನೆಂದು
ನಿನ್ನ ನೋಡುತ ನಲಿಯೆ ಪ್ರಮುಧಗಣವು
ಜಲಕೇಳಿಯೊಳು ಮೆರೆವ ಯುವತಿಯರ ಮೀಪದಿಂ
ಮಗಮುಗಿವ ಗಂಧವತಿಯತ್ತಣಿಂದೆ
ನೈದಿಲೆಯ ನರುಗಂಪಿನೊಡಗೂಡಿ ಸುಳಿದು ಬಹ
ತಂಗಾಳಿಯಲಿ ತೊನೆವ ಉಪವನವನೆಯೆ
ತೆರಳು ನೀಂ ತ್ರಿಭುವನಕೆ ಗುರುವಾದ ಚಂಡೀಶ
ನೆಲಸಿರುವ ಪುಣ್ಯಮಯಧಾಮವೆಡೆಗೆ.

೩೮

ನೀನಲ್ಲಿ ಮೆರೆಯುವ ಮಹಾಕಾಳನುಂದಿರವ
ಬೇರಾವ ವೇಳೆಯಲಿ ಸಾರ್ದರುಂ
ನಯನ ವೇಶವ ಮೀರಿ ದೂರದ ದಿಗಂತದಲಿ
ಸೂರ್ಯ ಮುಳುಗುವನರೆಗೆ ಅಲ್ಲಿ ನೆಲಸಿ
ಲೋಕವಂದಿತನಾದ ಶೂಲಿಯಾರಾಧನೆಗೆ
ಗುಡುಗುಗಳ ದನಿಗೈದು ಪಟಹವಾಗು
ಗಂಭೀರತರಮಾದ ನಿನ್ನ ಗರ್ಜಿತಗಳಿಗೆ
ಮುಂದೆ ನೀಂ ಸಂಪೂರ್ಣ ಫಲವ ಪಡೆವೆ.

೩೯

ನೃತ್ಯಸೇವಾಭರದೊಳಡಿಯನೆತ್ತಿಡುವಂದು
ಕಟಿಯ ಕಾಂಚೀದಾಮ ಝಣಝಣರೆನೆ
ರತ್ನವರ್ಣಚ್ಛವಿಯ ವಳಿಯ ಚಾಮರ ಮಿನುಗೆ
ಲೀಲೆಯಿಂ ಪಿಡಿದದನು ಬೀಸುವಂದು
ಕ್ಲಾಂತ ವೇಶ್ಯಾಜನದ ನಖಪದಕೆ ಸುಖವೀವ
ಮೊದಲ ಮಳೆವನಿಗಳನು ನೀನು ಸುರಿಯೆ
ಮಧುಕರ ಶ್ರೇಣಿವೊಲು ನಿಡಿದಾದಪಾಂಗಗಳ
ನಿನ್ನ ಕಡೆಗೆಸೆಯುವರು ಪ್ರೀತಿಯಿಂದೆ.

೪೦

ಆ ಬಳಿಕ ಶಿವನ ನಿಡುತೋಳುಗಳ ತರುವನವ
ಮಂಡಲಾಕಾರದಲಿ ಬಳಸಿ ನಿಂದು
ಅಭಿನವ ಜಪಾಕುಸುಮವೆಂತಂತೆ ಕೆಂಪಾಗಿ
ಬೈಗುವೆಳಗನು ತಳೆದು ಸುಭಗನಾಗಿ
ಉದ್ವೇಗ ಶಮನಸೊಳೆ ನಿಶ್ಚಲಾಕ್ಷಿಗಳಿಂದೆ
ಶಿವೆ ನಿನ್ನ ಭಕ್ತಿಯನ್ನೀಕ್ಷಿಸುತಿರೆ
ನಾಟ್ಯದಾರಂಭದಲಿ ಪಶುಪತಿಯ ಆರ್ದ್ರಗಜ
ಚರ್ಮಾಭಿಲಾಷೆಯನು ನೀಗಬೆಳಸು.

೪೧

ನೋಟವನು ತಡೆಗೈದು ಕವಿದ ಕಗ್ಗತ್ತಲೆಯ
ರಾಯಬೀದಿಯೊಳಲ್ಲಿ ಉಜ್ಜಯನಿಯ
ಯೋಷಿತೆಯರಂದ ಮಿಗೆ ರಮಣನವತಿಯ ಕುರಿತು
ಸಾನುರಾಗದಿ ತೆರಳಲನುವಾಗಿನೆ
ಕನಕ ನಿಕಷದ ತೆರದಿ ಹೊಳೆವ ಸೌದಾಮಿನಿಯ
ಬೆಳಕಿನಿಂ ನೀನವರ ದಾರಿ ತೋರು
ಮೊದಲೆ ಭಯಚಕಿತರಪ ಯೋಷಿತೆಯರವರ ನೀಂ
ಮಳೆಗರೆದು ಮೊಳಗಿರಿದು ಬೆದರಿಸದಿರು.

೪೨

ಚಿರವಿಲಸನೋದ್ವೇಗ ಭರದಿಂದೆ ಕಡುಬಳಲಿ
ಖೇದಗೊಳೆ ನಿನ್ನ ಸತಿ ಸೌದಾಮಿನಿ
ಸುಪ್ತ ಪಾರಾವತಗಳಿರುವ ಸೌಧಾಗ್ರವಲಿ
ನೀನುಮಾಯಾಸವನು ನೀಗಲೆಂದು
ಇರುಳು ನೂಕಲು ತಂಗಿ ನೇಸರುದಯಿಸುವಂದು
ಉಳಿದ ದಾರಿಯ ಕುರಿತು ತೆರಳು ಮುಂದೆ
ಕೈಕೊಂಡ ಸಖರರ್ಥ ಕೃತ್ಯಗಳನೆಸಗಲಿರೆ
ಸಾವಕಾಶಂಗೈವುದುಚಿತವಲ್ತು.

೪೩

ನೇಸರುದಯಿಸುವಂದು ಕಾಮಿಜನನೈತಂದು
ಮುನಿಸಿನಿಂ ಮೊಗದಿರುಹಿನಂಗನೆಯರ
ಕಂಬನಿಗಳಂ ತೊಡೆದು ಸಂತವಿಪ ಸಮಯವನು
ನೀನಂತೆ ದಿನಕರನ ತಡೆಯಬೇಡ.
ಪದುಮಲತೆಗಳ ಸೋಂಕೆ ಕಮಲನಾಥನನೆತ್ತಿ
ಹಿಮಕಣವ ಕಣ್ಣೀರನೊರಸಲೆಂದು
ಹಿಂದಿರುಗಿ ಬರುತಿರುವ ದಿನಕರನ ಕಿರಣಗಳ
ತಡೆವಂದು ಅವಸುರಿಮ ಕೋಪಗೊಳುವಂ

೪೪

ವಿಮಲಾಂತರಂಗಮೊಲು ನಿರ್ಮಲೋದಕವಿರಲು
ಗಂಭೀರೆ ತಾನಿರಲು ಪ್ರೇಯಸಿವೊಲು
ಛಾಯಾತ್ಮನಾವರೂ ಪ್ರಕೃತಿಸುಭಗನೆ ನಿನ್ನ
ನಾಕೆ ತಿಳಿನೀರಿನಲಿ ತಳೆದಿರುವಳು.
ಅದುವೆ ಕಾರಣದಿಂದೆ ಸಂಯಮಿಯವೋಲಿರದೆ
ಕುಮುದಮೊಲು ಬೆಳ್ಪಿಸೆವ ಗಂಭೀರೆಯ
ಚಟುಲತರ ಶಫರಗಳ ಚಂಚಲೋದ್ವರ್ತನಗ
ಳಾಲೋಕಗಳನೆಂತು ವ್ಯರ್ಥಗೈವೆ.

೪೫

ತಟನಿತಂಬವದಿನಿತು ತೆರೆದು ತೋರುವ ತೆರದಿ
ವಾನೀರ ಶಾಖೆಗಳ ಕರಗಳಿಂದೆ
ನಸುವೆತ್ತಿ ಪಿಡಿದಿರುವ ನೀಲಬಣ್ಣದಿನೆಸೆವ
ಆ ನದಿಯ ನೀರುಡೆಯನಿರದೆ ಸೆಳೆದು
ಮೇಲೆ ನೀನಾಗನದೆ ಜಗುಳಿ ಕೆಳಗಿಳಿಯುತಿರೆ
ಪಯಣ ಸಮನಿಪುದೆಂತು ನಿನಗೆ ಸಖನೆ !
ರುಚಿಯನರಿತಿಪ ರಸಿಕನಾವನೀ ಲೋಕದಲಿ
ವಿನ್ಯತ ಜಘನೆಯನಂತು ಕೊರೆಯಲಹನೊ !

೪೬

ನಿನ್ನ ಮಳೆವನಿಗಳಿಂ ಮೈಯುಬ್ಬಿ ನಾಂದಿಳೆಯ
ತನಿಸೊಗಡಿನೊಡವೆರೆದು ಕಮ್ಮಿತಾಗಿ
ಕಾಡಾನೆಗಳ ಬಳಗಮಾನಂದದಿಂ ಮೂಸಿ
ಘೀಳಿಡುತೆ ಹೀರ್ವಂದು ಮಂದವಾಗಿ
ಕಾಡು ಅತ್ತಿಯ ಮರನ ಪಣ್ಗಳಂ ಗಳಿಯಿಸುತೆ
ಸುಳಿವಂದು ತಣ್ಣನೆಯ ಗಾಳಿಯಾಗಿ
ಮಂದ ಮಂದಾಗಮದ ಮಂದಾನಿಲಂ ಬೀಸಿ
ನಿನ್ನ ಕೊಂಡೊಯ್ಯುವನು ದೇವಗಿರಿಗೆ.

೪೭

ದೇವಗಿರಿಯಲಿ ಮತ್ತೆ ನಿತ್ಯಸನ್ನಿಹಿತನಹ
ಷಣ್ಮುಖಸ್ವಾಮಿಯನು ಕಾಣುವಂದು
ಹೂಮುಗಿಲವೋಲಿರುವ ಸೊಗದ ರೂಪವನಾಂತು
ಪ್ರೇಮಗಂಗಾಜಲಮೊಳಾರ್ದ್ರಮಾದ
ಪುಷ್ಪಗಳ ಮಳೆಯಿಂದಲಾ ಕುಮಾರನ ಮಿಸಿಸು
ವಾಸವನ ಸೇನೆಯನು ಕಾಯಲೆಂದು
ಚಂದ್ರತೇಖರನಂದು ಅಗ್ನಿಮುಖದೊಳಗಿರಿಸಿ
ದಾತನತ್ಯಾದಿತ್ಯ ತೇಜನಲ್ತೆ !

೪೮

ಕಾಂತಿರೇಖಾನಲಯ ವಿನ್ಯಾಸದಿಂದೆಸೆವ
ಕೆಳಗುಮುಂದಾ ನವಿಲುಗರಿಯನಾಯ್ದು
ಮಗನ ನೋಪಮೊಳದನು ಗೌರಿಯಾವರದಿಂದೆ
ಕುನಲಯದ ದಳದೊಡನೆ ಕವಿಯೊಳಿರಿಸೆ
ಶಿವನ ಶತಕಲೆಯಿಂದ ಬೆಳ್ಪಡರ್ವಪಾಂಗಮಿಹ
ಪಾವಕಿಯ ವಾಹನವನಾ ಶಿಖಿಯನು
ಕುಣಿಸು ಮಾರ್ದನಿ ಕೊಡುವ ಪರ್ವತಾಗ್ರಮನೇರಿ
ಗುರುತರವ ಗರ್ಜನೆಯ ದನಿಗಳಿಂದೆ.

೪೯

ಇಂತು ಶರವಣಭವನ ಷಣ್ಮುಖನನರ್ಚಿಸುತೆ,
ಮಳೆಯ ತುಂತುರ್ವನಿಯು ಬೀಳ್ವುದೆಂದು
ಕರದೆ ವೀಣೆಗಳೆರುವ ಸಿದ್ಧಯುಗಳಗಳಂದು
ಭಯದಿಂದೆ ಹಿಂಜರಿದು ದಾರಿಬಿಡಲು ;
ಮುಂದುಮುಂದುತ್ತರಿಸಿ ಗೋಯಜ್ಞದಿಂಮೊಗೆದು
ಸ್ರೋತರೂಪವನಾಂತು ಭೂಲೋಕದಿ
ರಂತಿದೇವನ ಕೀರ್ತಿ ತಾನೆಂಬ ತೆರನೆಸೆವ
ಚರ್ಮಣ್ವತೀನದಿಯ ಸನ್ಮಾನಿಸು.

೫೦

ಶ್ರೀಹರಿಯ ವೈಸಿರಿಯ ಕದಿವವೋಲಿಹ ನೀನು
ನೀರು ಕುಡಿವುದಕೆಂದು ಬಾಗಿದಂದು
ಪಿರಿದಾದರೂ ನೋಡೆ ದೂರವಿರುವುದರಿಂದೆ
ಕಿರಿದಾಗಿ ತೋರುತಿಹ ನದಿಯ ನೀರಂ ;
ನಡುವೆ ಒಂದೇ ಒಂದು ತೋರವಾಗಿರುವಂಥ
ಇಂದ್ರನೀಲದ ಮಣಿಯನಾಂತು ಎಸೆವ
ಭೂಮಿದೇವಿಯ ಕೊರಳ ಮಣಿಹಾರವೆಂದೆಣಿಸಿ
ಖೇಚರರು ನಿನ್ನನೊಲಿದೀಕ್ಷಿಸುವರು.

೫೧

ಆ ನದಿಯನುತ್ತರಿಸಿ ತೆರಳು ನೀನುತ್ತರಕೆ
ಬಳ್ಳಿ ಹುಬ್ಬಿನ ಹಾವಭಾವನರಿತು
ಕಣ್ಣೆನೆಯ ಹಾರಿಸುತೆ ಹೊಮ್ಮಿ ಹೊಳೆಯುವ ಕರಿಯ
ಕಾಡಿಗೆಯ ತೆರನೆಸೆವ ಕಂಗಳಿಂತೆ
ಕುಂದಸುಮ ಚಲನಾನುಸಾರಿಯಹ ಮಧುಕರನ
ಕಾಂತಿಯನು ಅಪಹರಿಸುವಂತೆಸೆಯುವ
ದಶಪುರ ವಧೂಜನರ ನೇತ್ರಕೌತೂಹಲಕೆ
ನಿನ್ನಾತ್ಮ ಬಿಂಬಮುಂ ಪಾತ್ರಮೆನಿಸು.

೫೨

ಬಳಿಕ ಬ್ರಹ್ಮಾವರ್ತವೆನುವ ಜನಪದವಿರುವು
ದದನು ಛಾಯಾಮಾತ್ರದಿಂದಲೈದಿ,
ನೀನು ಬಲ್ಮಳೆಗರೆದು ಸುರಿವ ಜಲಧಾರೆಯಲಿ
ಬಿರಿದ ನೀರೇಜಗಳ ಮುಸುರುವಂತೆ
ನಿಶಿತವಹ ನೂರಾರು ಬಾಣಗಳ ಮಳೆಗರೆದು
ನೃಪರ ಮುಖಕಮಲಗಳ ನರನುಮುಂತೆ
ಮುಸುರಿ ಕ್ಷಾತ್ರವ ಮೆರೆದ ರಣಭೂಮಿಯಾಗಿರುವ
ಆ ಕುರುಕ್ಷೇತ್ರವನು ಸಾರು ಮುಂದೆ.

೫೩

ತನ್ನ ಸತಿ ರೇವತಿಯ ಲೋಚನಾಂಕಮನಾಂತ
ತನಗೆ ಅತಿಹಿತಮಾದ ಸುರೆಯನುಳಿದು
ಬಾಂಧವರ ಮಮತೆಯಲಿ ಸಮರಭೂಮಿಯನುಳಿದು
ಬಲರಾಮನಾ ಸರಸ್ವತಿಯನೈದಿ
ಅದರ ಜಲಸೇವನೆಯೊಳಂದು ಶುಚಿಯಾವನೆನೆ
ಆ ಸರಸ್ವತಿನದಿಯ ಪುಣ್ಯಜಲವ
ನೀನುಮಾಸ್ವಾದಿಸುತೆ ಹೃದಯ ಶುದ್ಧಿಯ ಪಡೆದು
ವರ್ಣಮಾತ್ರವೆ ಕೃಷ್ಣನೆನಿಸು ಸಖನೆ.

೫೪

ಸಗರರಾಜಕುಮಾರರಂದು ದಿವವೇರಲಿರೆ
ವಿರಚಿಸಿದ ಸೋಪಾನ ಪಂಕ್ತಿಯೆನುವ
ಗೌರಿದೇವಿಯ ಮುಖದ ಭೃಕುಟಿರಚನೆಯನಿರವೆ
ನೊರೆಯಿಂದೆ ನಗುವಂತೆ ಸೋರುತಿರುವ
ಶಿರದ ಚಂದಿರನೊಡನೆ ಶಂಭುವಿನ ಕೇಶವನು
ತೆರೆಗೈಗಳಿಂದೊತ್ತಿ ಹಿಡಿದೆಳೆಯುವ
ಕನಖಲದ ಸಾಲೆಯೊಳು ಹಿಮಗಿರಿಯನಿಳಿದುಬಹ
ಜಾಹ್ನವಿಯ ಸುರನದಿಯ ನೋಡಲಿರುವೆ.

೫೫

ಪಿಮ್ಮೆಯ್ಯನಾಗಸದೊಳಾರಿ ಮುಮ್ಮೆಯ್ಯಿಂದೆ
ಇಂದ್ರಸ್ಯೈರಾವತವ ಪೋಲ್ತು ತೆರದಿ
ತಿರುಗಿ ನದಿಗೆದುರಾಗಿ ಜಗುಳಿ ಕೆಳನೊಗವಾಗಿ
ನಿರ್ಮಲ ಸ್ಫಟಿಕವಂತೆಸೆಯುತಿರುವ
ಬೆಳ್ಪಿನಲ ಸುರನದಿಯ ನೀರ್ಗುಡಿಯಲೆಳಸುತಿರೆ
ನಿನ್ನ ಕರಿಮೈ ನೆಳಲು ನೀಲೊಳೊಗೆಯೆ
ಆಸ್ಥಾನದೊಳು ಯಮುನೆ ತಪ್ಪೊಡನೆ ಸೇರಿತೆನೆ
ಗಂಗೆ ಕಪ್ಪೊಳಿಸುವನು ಸುಭಗೆಯಾಗಿ

೫೬

ಕುಳ್ಳಿರ್ದ ಕತ್ತುರಿಯ ಮಿಗಮುದವ ಗಂಧದಿಂ
ಮನಮುಳಿಪ ತೆರೆಗಳಿಹ ಕಂಪಿನೆಡೆಯ
ಹಿಮಸಮೂಹಗಳಿಂದೆ ಗೌರವರ್ಣವನಾಂತ
ಗಂಗೆಯುಗಮಿಸುತಿರುವ ತುಹಿನಗಿರಿಯ
ಸಾರಿ ನೀಂ ದಾರಿಸಹಿವಲಸಿಕೆಯ ನೀಗಲೆಂ-
ದಾ ಗಿರಿಯ ಶಿಖರದಲಿ ನೆಲಸಿದಂದು
ಅಚ್ಚ ಬೆಳ್ಪಿನೊಳಿಸಿನ ಹರನ ವಾಹನನಗೆದು
ತಾಳ್ದ ಕೆಸರಿನವೋಲು ಶೋಭಿಸಲಿಹೆ.

೫೭

ಬನಗಾಳಿ ಬೀಸುತಿರೆ ಸರಳ ತರುಶಾಖೆಗಳ
ಸಂಘರ್ಷದಿಂದೊಗೆದ ಕಿಡಿಗಳಿಂದೆ
ಚರಿಪ ಚಮರೀಮೃಗದ ವಾಲಭಾರಗಳುರಿಯೆ
ಕಾಳ್ಗಿಚ್ಚು ಹಿಮಗಿರಿಯ ಬಾಧಿಸುತಿರೆ
ಧಾರಾಸಹಸ್ರಗಳ ನುರಿಸಿ ನೀನದನಂತೆ
ಸಂಪೂರ್ಣಮೆನಲೊಡನೆ ತವಿಸಲೆಳಸು
ಆರ್ತಜನರಾಪತ್ತನುಪಶಮನಗೊಳಿಸುವುದೆ
ಉತ್ತಮನ ಸಂಪತ್ತಿಗುಚಿತ ಫಲವು.

೫೮

ಸಿದ್ಧರಿಂದನವರತ ಬಲಿಷ್ಠರಕೆಗೊಳ್ಳುತ್ತೆ
ಆಂದದಿಂದವೆಯೊಳಗೆ ಮೂಡಿ ನಿಂದ
ಆರ್ಧೇಂದು ಮೌಳಿಯಾ ಚರಣವಿನ್ಯಾಸವನು
ಭಕ್ತಿಯಲಿ ಬಲವಂದು ಬಾಗಿ ನಮಿಸು
ಶ್ರದ್ಧಾತ್ಮರಾದವರು ಅದರ ದರ್ಶನದಿಂದೆ
ಪಾಪವೆಲ್ಲವ ಕಳೆದು ಪುಣ್ಯವಶದಿ
ದೇಸವಿನನುಳಿದಂದು ಶಾಶ್ವತದ ಗಣಪದವ
ಅಲ್ಲಿ ಕೈಲಾಸದಲಿ ಪಡೆವರಲ್ತೆ.

೫೯

ಅಲ್ಲಿ ಶರಭಗಳಿರವೆ ಮೂರಸರಿಯುವ ನಿನ್ನ
ನೋಡಿ ಮದಗಜವೆಂದು ಭ್ರಮಿಸಿಬಂದು
ತಮ್ಮಂಗನನು ತಾವೆ ಭಂಗಗೊಳಿಸುವ ತೆರದಿ
ಕೋಪದಿಂದುರವಣಿಸಿ ಬೀಳುವಂದು
ಒಡನೆ ನೀಂ ತುಮುಲತರದಾಲಿಕಲ್ಲಳಿಗೆದು
ಚದುರಿಸಾ ಶರಭಗಳ ಮೂರವೆಸೆಗೆ
ನಿಷ್ಫಲಾರಂಭಗಳಲುಮ್ಯಕ್ತನಾವನನು
ಪರಿಭವಕೆ ತಾನೆ ಗುರಿಯಾಗದಿರನೆ !

೬೦

ಸುಳಿವೆಳೆಯ ಗಾಳಿಯಲಿ ನಳನಳಿಸಿ ಬೆಳೆದಿರುವ
ವೇಣುವನವಿನಿದಾಗಿ ದನಿಗೈಯಲು
ಆ ದನಿಯನನುಸರಿಸಿ ಕಿನ್ನರಿಯೊಲವಿನಿಂ
ತ್ರಿಪುರ ಜಯಗೀತೆಯನು ಹಾಡುತಿರಲು
ನಿನ್ನ ಮಧುರ ಧ್ವನಿಗಳಲ್ಲಿ ಕಂದರಗಳಲಿ
ಮುರಜದೊಲು ನೃದುವಾಗಿ ಮೊಳಗುತಿರಲು
ಪಶುಪತಿಯ ನರ್ತನವ ಸಂಗೀತ ಸಾಧನಗ-
ಳೆಂದು ತಾಂ ಸಂಪೂರ್ಣಮನಿಸದಿಹವೆ !

೬೧

ಹಿಮಗಿರಿಯ ಸಾನುವಿನ ಸುಂದರ ನಿವೇಶಗಳ-
ನೀಕ್ಷಿಸುತೆ ನಲಿದು ನೀಂ ಮುಂದೆ ನಡೆದು
ಪರಶುರಾಮನ ಯಶವನಳಿಗೆ ಸಾರುತಲಿರುವ
ಹಂಸಂಗಳೊಳಪುಗುವ ಕ್ರೌಂಚ ಬಿಲವ
ಬಲಿಯ ನಿಯಮನಕೆಂದು ಜತಸಗೈದಾ ಹರಿಯ
ಶ್ಯಾಮ ಚರಣಸ್ಥಾನವೆಂಬ ತೆರವ
ನಿನ್ನೊಡಲ ನಿಡಿದೆನಿಸಿ ತಿರುಗಿ ಅದರೊಳು ನುಸಿದು
ಉತ್ತರದ ದೆಸೆಗೆಂದು ತೆರಳು ಮುಂದೆ.

೬೨

ದಶಮುಖನ ಭುಜಬಲವ ಬಿಗಿವ ತೆಕ್ಕೆಯ ಭರಕೆ
ಜಗುಳಿ ಕಿಕ್ಕಿರಿವ ಗಿರಿ ಸಾನುವಿರುವ
ತ್ರಿದಶನಿತಾಜನವ ದರ್ಶಿಸುತ ತೆರನಿರುವ
ಕೈಲಾಸ ಪರ್ವತವ ಅತಿಥಿಯಾಗು
ಕುಮುದದೊಲು ಬಿಸುಪಾವ ತುಂಗಶಿಖರಗಳಿರುವ
ಆಗಸವನಳೆದಿರುವ ಕೈಲಾಸವು
ದಿನದಿನವು ರಾಶಿಗೈದೀಶ್ವರನ ಸಿತಹಾಸ
ವೆಂಬತೆರನೆನಿಪು ಕಣ್ಮನಿಸುತಿಹುದು.

೬೩

ಆದೆ ತಾನೆ ಕಡಿದಿರುವ ಗಜದಂತದಂದದಲಿ
ಅಚ್ಚ ಬೆಳ್ಪಿನೊಳೆಸೆವ ಧವಳಗಿರಿಯ
ನುಣ್ಣನರೆದಂಜನದ ತೆರದೆ ಕರಿದಾಗಿರುವ
ನೀನದರ ಸಾನುವನು ಸೇರಿದಂದು
ಗೌರಾಂಗನೆಂದೆನಿಸಿ ಕ್ಷೋಭಿಸುವ ಹಲಧರನ
ಹೆಗಲಮೇಲೆಸೆದ ಕರಿವಸನದಂತೆ
ಎವೆಯಲುಗದಂದದಲಿ ನಿನ್ನನವಲೋಕಿಸುವ
ಬೆಡಗಿನೊಂದಂದವನು ತಳೆವೆಯಲ್ತೆ!

೬೪

ಗೌರಿ ಹೆದರುವಳೆಂದೆ ಭುಜಗವಲಯವನುಳಿದು
ಶಂಭು ಕೈಹಿಡಿದವಳ ನಡಸುವಂದು
ಕ್ರೀಡೆಗೆಂದಣಿಗೈದ ಕೈಲಾಸದೆಡೆಗಳಲಿ
ಪಾದಚಾರಿಣಿಯಾಗಿ ವಿಹರಿಸುತಿರೆ
ನೀನವರ ಮುಂಮೋಡಿ ಜಲಕಣಗಳೆಲ್ಲವನು
ಘನಿಸಿರಿಸಿ ಮೆಟ್ಟಲುಗಳಿರವ ಪ್ರೋಲ್ತು
ರೂಪಾಂತರಂ ಪಡೆದು ವಿರಚಿಸೈ ದೇವಿಯರ
ಮಣಿತಟೋಪಹಣಕೆ ಸೋಪಾನಮಂ.

೬೫

ದೇವವನಿತೆಯರಲ್ಲಿ ಕನಕವಲಯಗಳಿಂದ-
ಲಿರಿಯುತಿರೆ ಜಲಧಾರೆ ಚಿಮ್ಮಿ ಸುರಿಯೆ
ಯಂತ್ರಧಾರಾಗೃಹದ ತೆರದೊಳಂದವರಂತು
ನಿನ್ನ ರೂಪಾಂತರಿಸಿ ನಲಿದು ಮಿಂದು
ಬಿಸಿಲ ಬೇಗೆಯ ಬವಣೆಗೊದಗಿಬಂದಿಹ ನಿನ್ನ-
ನಲ್ಲಿಂದ ತೆರಳಲಿರೆ ತಡೆಯುವಂದು
ಕೇಳೀನಿಮಗ್ನೆಯರನವರ ನೀಂ ಭಯಗೊಳಿಸು
ಕರ್ಣಕರ್ಕಶಮಾದ ಮೊಳಗನಿರಿದು !

೬೬

ಕನಕ ಕಮಲಗಳೊಗೆವ ಮಾನಸ ಸರೋವರದ
ನೀರು ಮೊಗೆದಾಯಸವ ಕಳೆದು ಜಲವ!
ಆ ವೇಳೆಗಲ್ಲಿರುವ ಇಂದ್ರನೈರಾವತವ
ನೆಳಲಗೌಸಣಿಗೆಯಲಿ ಸಂಸೇವಿಸಿ
ಮುಂದೆ ಕಲ್ಪದ್ರುಮದ ಕಿಸಲಯಾಂಕುರಗಳನು
ನಿನ್ನ ಗಾಳಿಯ ಬೀಸಿ ಚಲಿಸಿ ನಲಿಸಿ
ಇಂತು ನಾನಾ ರೆರನ ಲಲಿತ ಜೀವ್ಯೆಗಳಿಂದ-
ಲಾ ನಗೇಂದ್ರಸೊಳಲ್ಲಿ ನೆಲಸಿ ಸುಖಿಸು.

೬೭

ಪ್ರಿಯತಮನ ತೊಡೆಯಂತೆ ಕೈಲಾಸಸಾನುವಿರೆ
ಹರಿವ ಗಂಗೆಯೆ ಜಗುಳಿಮುಡೆಯಾಗಿರೆ
ಅಲ್ಲಿ ಅಲಕೆಯ ಸೋಪಿ ಕಾಮುಚಾರಿಯೆ ಸಖನೆ
ಅದನು ಕಾಮಿಸಿಯೆಂದು ಭಾವಿಸದಿರೆ!
ತುಂಗ ಸೌಧಗಳಿರುವ ಅಲಕೆ ಕಸ್ಮೊಳಿಸುವುದು
ನೀರ ಸುರಿಸುವ ಮುಗಿಲ ಧರಿಸಿದಂದು
ಹೊಳೆವ ಮುಂಗುರುಳಿನಲಿ ಮುತ್ತುಗಳ ಹಾರವನು
ತಳೆದು ಕಂಗೊಳಿಸುತಿರುವಿನಿಯಳಂತೆ!

ಉತ್ತರ ಮೇಘ

೧

ವಿದ್ಯುತ್ತಿನಂತೆಸವ ಲಲಿತವನಿತೆಯರಿಂದೆ
ಇಂದ್ರಚಾಪದ ತೆರದ ಚಿತ್ರದಿಂದೆ
ಸ್ನಿಗ್ಧಗಂಭೀರತಾಘೋಷದಂದದಿ ಮೊರೆವ
ನೃತ್ಯಗೀತಕೆ ನುಡಿವ ಮುರಜದಿಂದೆ
ನೀರ್ಮುಗಿಲ ತೆರನಿರುವ ಮಣಿವಿಮಾನಗಳಿಂದೆ
ಅಭ್ರಚುಂಬಿಗಳಾವ ಶಿಖರದಿಂದೆ
ಸಹಧರ್ಮಗುಣಗಳಿಂದಂತಂತೆ ನಿನ್ನ ತಾಂ
ಪೋಲ್ವ ವ್ಯಾಸಾದಂಗಳಿರುವುವಿಲ್ಲಿ.

೨

ಬಾಲಕುಂದವ ಸರವ ಮುಂಗುರುಳಿನಲಿ ಮುಡಿದು
ಲೀಲೆಗೆನೆ ಕಮಲವನು ಕರವೆ ಪಿಡಿದು
ಲೋಧ್ರವೆಸಳಿನ ರಜದ ಲೇಪನವ ಹೊಗರೆಸೆವ
ಪಾಂಡುವರ್ಣತ್ರೀಯ ಮೊಗಮೊಳಾಂತು
ಸುಂದರ ಶಿರೀಷವನು ಧರಿಸಿ ಕರ್ಣಂಗಳಲಿ
ಕುರವಕದ ಹೊಸತಾವ ಜಡೆಯೊಳಿರಿಸಿ
ನಿನ್ನ ಆಗಮನದಿಂದರಳಿದೆಳೆ ನೀಪಗಳ
ಬೈತಲೆಯೊಳಿರಿಸಿರುವ ವಧುಗಳಿಹರು.

೩

ಆವಗಂ ಮದವೇರಿ ಮೊರೆಯುತಿಹ ದುಂಬಿಗಳಿ
ನಾವಗಂ ಹೂಬಿಡುವ ತರುಗಳಿಂದೆ
ಆವಗಂ ಅರಸಂಬೆ ವಿರಚಿಸುವ ಕಾಂಚಿಯಿಂ
ದಾವಗಂ ಪದ್ಮನಳಿನಂಗಳಿಂದೆ
ಆವಗಂ ಪೊಳೆಯುತಿಹ ಗರಿಗೆದರಿ ಕೊರಲೆತ್ತಿ
ಕೂಗುತಿಹ ಗೃಹಮಯೂರಂಗಳಿಂದೆ
ಆವಗಂ ಕತ್ತಲೆಯನೋಡಿಸುವ ಬೆಳುದಿಂಗ
ಳಿರುಳಿನಿಂ ರಮ್ಯವೆನಲೆಸೆವುದಲಕೆ.

೪

ಆನಂದದಿಂದಲ್ಲದನ್ಯಕಾರಣಗಳಿಗೆ
ಕಣ್ಣೀರು ಕರೆಯರಾ ಯಕ್ಷಜನರು.
ವಿಪ್ರಯೋಗದ ದುಃಖವಿರದು ವಿತ್ತೇಶರಿಗೆ
ಪ್ರಣಯಕಲಹವನುಳಿದು ಬೇರೆ ಕತದಿ.
ಇಷ್ಟಸಂಯೋಗದೊಳೆ ಪರಿಹರಿಸಬಹುದಾದ
ಕುಸುಮಶರ ಸಂಜನಿತ ತಾಪವುಳಿದು
ಅನ್ಯತಾಪಗಳಿಂದೆ ಪರಿತಪಿಸರವರಲ್ಲಿ
ಯೌವನವನೊಂದನುಳಿದನ್ಯವಶೆಯಿಲ್ಲ.

೫

ತಾರೆಗಳ ಪಡಿನೆಳಲ ಕುಸುಮರಚಿತಗಳನಿಸಿ
ಮೆರೆವ ಸಿತಮಣಿಮಯದ ಹರ್ಮ್ಯಗಳಲಿ
ಉತ್ತಮ ಸ್ತ್ರೀಜನರ ಸಹವಾಸ ಸೌಖ್ಯದಲಿ
ಯಕ್ಷರಾನಂದದಲಿ ಮೋದವಡೆದು
ಗಂಭೀರ ಘೋಷದಲಿ ನಿನ್ನಪೊಲು ದನಿಗುಡುತೆ
ಮೃದುವಾಗಿ ನುಡಿವ ಪುಷ್ಕರಗಳಿಂದೆ
ಕಲ್ಪವೃಕ್ಷಗಳಿಂದಲೊಗೆದ ರತಿಫಲವೆನುವ
ಮಧುವನಾಸ್ವಾದಿಸುವರಂದದಿಂದೆ.

೬

ಮಂದಾಕಿನೀನದಿಯ ಶೀತಳೋದಕದಿಂದೆ
ಸುಳಿವ ತಂಬೆಲರಿನಲಿ ಸೇವ್ಯರಾಗಿ
ದಡವೆಡೆಯೆ ಬೆಳೆದಿರುವ ಮಂದಾರವೃಕ್ಷಗಳ
ನೆಳಲಿನಾಸರೆಗಳಲಿ ಬೇಗೆ ನೀಗಿ
ಕನಕಸಿಕತದ ಹುಡಿಯ ಹಿಡಿಹಿಡಿಯನೆರಚಿ ತಾ
ವದರೊಳವಿತಿರಿಸಿರುವ ಮಣಿಗಳಿಂದೆ
ಅಮರರುಮೀಕ್ಷಿಸುವ ಯಕ್ಷಕನ್ಯೆಯರಲ್ಲಿ
ಪುಡುಕುವಾಟವನಾಡಿ ನಲಿಯುತಿಹರು.

೭

ತೊಂಡೆಹಣ್ಣಿನ ತುಟಿಯ ಪ್ರಿಯತಮೆಯರುಟ್ಟಿರುವ
ರೇಸಿಮೆಯ ಸೀರೆಯನು ನೆಳೆಯಲೆಂದು
ನೀವಿಯನು ನಡಲಿಸುತೆ ರಾಗದಿಂ ಪ್ರಿಯರದನು
ಕಂಪಿಸುವ ಕೈಗಳಿಂದೆಳೆಯುವಂದು
ತುಂಗಕಿರಣವನೆಸೆದು ತಮ್ಮೊಡೆರೆ ತೊಳಗುತಿಹ
ರತ್ನಮಣಿದೀಪಗಳ ಕೆಡಿಸಲೆಂದು
ಹೇಪದಿಂವಂಗನೆಯರೆರಚುತಿರೆ ಕುಂಕುಮವ
ವಿಫಲವಾಗುವುವವರ ಹಿಡಿಯ ಪುಡಿಯು.

೮

ಮೋಡಗಳ ತಡೆಹರಿದ ನಟ್ಟಿರುಳಿನಲಕೆಯಲಿ
ತೊಳಗುತಿಪ ಚಂದಿರನ ಕಿರಣದಿಂದೆ
ತಂತುಜಾಲಮೊಳಿರುವ ಶಶಿಕಾಂತಮಣಿಮಾಲೆ
ಮಿಗಿಲು ಹನಿಹನಿಗರೆದು ಕರಗುತಿಳಿಮ
ತಮ್ಮನೊಲಿದಪ್ಪಿರುವ ಪ್ರಿಯತಮರ ತೋಳುಗಳ
ಜಗುಳಿದಾಲಿಂಗನಮೊಳೊರಗಿವಂಥ
ಅಲಕೆಯ ವಧೂಜನರ ರತಿಕೇಳಿಯಿಂಮೊಗೆದ
ದೇಹದಾಯಾಸವನು ನೀಗುತಿಹುದು.

೯

ನಿನ್ನಂಥ ಮುಗಿಲುಗಳ ಮರುತನೋಡಿಸಿ ತಂದು
ಅಲಕೆಯುಪ್ಪರಿಗೆಯೊಳು ತೂರಿದಂದು
ಹರ್ಮ್ಯಾಗ್ರಭೂಮಿಗಳ ಚಿತ್ರತಾಲೀಖಗಳ
ಜಲಕಣಗಳಿಂದಳಿಸಿ ಮೋಹನೆನಿಸಿ
ಶಂಕೆತಟ್ಟವೋಲು ಒಡನೆ ಅಲ್ಲಿಂದಿರದೆ
ಹೊಗೆ ಹೊರಗೆ ಹೊರಡುವುದನನುಕರಿಸುತೆ
ಅದನೊಳತಿ ನಿಪುಣತೆಸೆ ನುಸುಳುವುವು ಮರೆಯಾಗಿ
ಜಾಲಂಧ್ರದಿಂದೆ ಧೂರ್ಧೂರಿತಮಾಗಿ.

೧೦

ಒಳಮನೆಯೊಳವಿತರಿಸಿದಕ್ಷಯ್ಯನಿಧಿಗಳಿರೆ
ವಿಬುಧವನಿಪಯರಾಗಿ ಹೆಸರುಗಳಿಸಿ
ಮೆರೆವ ಗಣಿಕಾಜನರ ಬಸುರಿರದ ಸರಸಗಳ
ಸಹವಾಸ ಸುಖಗಳಲಿ ಮುದಿತರೆನಿಸಿ
ಧನಪತಿಯ ಕೀರ್ತಿಯನು ಮೇಲ್ಪನಿಂಚೊಳುಲಿಯುತಿಹ
ಸವಿನೊರಲ ಕಿನ್ನರರ ಮೇಳಪೊಡನೆ
ವಿಭ್ರಾಜವೆನುವ ಬಹಿರುದ್ಯಾನನನನುಭವಿಸು
ತನುದಿನವು ಸುಖಿಸರಾ ಕಾಮಿ ಜನರು.

೧೧

ಅಲಕದಿಂದುದುರಿರುವ ಮಂದಾರವರಳಿಂದೆ
ಮಕರಿಕಾಪತ್ರಗಳ ದಳಗಳಂದೆ
ಕವಿಗಳಿಂ ಜಗುಳರುವ ಕನಕ ಕಮಲಗಳಂದೆ
ಕಾಮಿನಿಯಪಾತುರವೆ ನಡೆಯುವಂದು
ಕೊರಳ ಹಾರವು ಹರಿದು ದಾರದಿಂದುದುರಿರುವ
ಮುತ್ತುಗಳ ಸರದಿಂದೆ ಮಣಿಗಳಂದೆ
ನಿಶಿಯೊಳಭಿಸಾರಿಕೆಯ ಸೊಲಿದು ಸುಳಿದಾ ದಾರಿ
ನೇಸದುದಯದೊಳಿರವೆ ಕಜ್ಜಸೆವ್ಪದು.

೧೨

ಅಲ್ಲಿ ಸಾಕ್ಷಾತ್ತಾಗಿ ಧನಪತಿಯ ಸಖನಾದ
ಮಹದೇವ ನೆಲಸಿರುವನೆಂದು ತಿಳಿದು
ಷಟ್ಪದವೆ ಮೌರ್ವಿಯೆಸಲೆನೆವ ಕೋದಂಡವನು
ಮನ್ಮಥನು ಭಯದಿಂದೆ ಧರಿಸನೆಂಬುಂ.
ಕಾಮುಕರ ಗುರಿಮಾಡಿ ತಪ್ಪದವರನು ಸೆಳೆವ
ಹುಬ್ಬುಗಂಟಿಕ್ಕಿರುವ ನೋಟವಿರುವ
ಚತುರ ವನಿತಾಜನರ ವಿಭ್ರಮ ವಿಲಾಸಗಳೆ
ಮನ್ಮಥಾರಂಭಗಳನೆಸಗುತಿಹವು.

೧೩

ಚಿತ್ರತರ ವಸನಗಳ ವಿಧವಿಧದ ತೊಡವುಗಳ
ಪುಷ್ಪಗಳ ಪತ್ರಗಳ ಕಿನಲಯಗಳ
ವಿಭ್ರಮವನಕ್ಷಿಗಳಿಗುಪದೇಶಮಾಳ್ಪಿಂದು
ದಕ್ಷತೆಯನಾಂತಿರುವ ಮಧುರಸಗಳ
ಚರಣಕಮಲಂಗಳಿಗೆ ನ್ಯಾಸಯೋಗ್ಯಗಳಾದ
ಪೊಳೆವ ಲಾಕ್ಷಾರಸದ ಲೇಪನಗಳ
ರಮಣಿಯರಲಂಕಾರ ಸಾಧನಗಳಿಲ್ಲವನು
ಕಲ್ಪವೃಕ್ಷವೊಂದೆ ಕೊಡುವುದಲ್ಲಿ.

೧೪

ಅಲ್ಲಿ ಧನಪತಿಯ ಗೃಹಮುತ್ತರದೊಳೆನ್ನ ಮನೆ
ದೂರದೊಳೆ ತೋರುವುದು ಕಣ್ಗೆಸೆಯುತೆ
ಸುರಪತಿಯ ಧನುವಿನಂತತಿ ಚಾರುತರವಾವ
ಮಕರತೋರಣದಿಂದೆ ಮನಸೆಳೆಯುತೆ
ಅವರುಸಾಂತಮೊಳಿಹುದು ಕೃತಕತನಯನ ತೆರೆದೊ
ಳೆನ್ನ ಕಾಂತೆಯು ಮೋಹದಿಂದ ಬೆಳಸೆ
ಕೈಗೆ ನಿಲುಕುವ ತೆರದೆ ಪೂಸೊಂಚಲಿಂ ಬಾಗಿ
ನಿಂದೊಂದು ಬಾಲಮಂದಾರ ತರುವು.

೧೫

ಮರಕತದ ಶಿಲೆಗಳಲಿ ವಿರಚಿಸಿದ ಸೋಪಾನ
ಮಾರ್ಗಮಿಹ ವಾಪಿಯೊಂದಿರುವುದಲ್ಲಿ ;
ರಮಣೀಯಮೆನಲೆಸೆವ ವೈಡೂರ್ಯನಾಳಗಳ
ಕನಕ ಕಮಲಗಳಿಂದೆ ನಿಬಿಡಮಾಗಿ.
ಆ ಕೊಳದ ನೀರಿನಲಿ ನೆಲಸಿರುವ ಹಂಸಗಳು
ನಿನ್ನ ನೋಡಿಯುಮಳಲಸಿನಿಸಾನದೆ
ಸನಿಹದೊಳೆ ಸೋರುವಾ ಮಾನಸವನಾತಿಸದೆ
ಸೋತ್ಕಂಠೆಯಿಂದವನು ಸ್ಮರಿಸದಿಹವು.

೧೬

ಆ ಕೊಳದ ತೀರದೊಳೆ ಅತಿ ಮನೋಹರವಾದ
ಇಂದ್ರನೀಲದ ಮಣಿಯ ಶಿಖರವಿರುವ
ಕನಕ ಕದಳೀವನದ ವೇಷ್ಟನದೊಳಿಣುಕುತಿಹ
ಕ್ರೀಡೆಗೆಂದಣಿಯದ ಶೈಲವಿಹುದು.
ಮಿಂಚಿನಂಚಿನೊಳೆಸೆದು ಮಿರುಗುತಿಹ ಹೇ ಸಖನೆ
ನಿನ್ನವೊಲೆ ತೋರುತಿಹ ಗಿರಿಯನದನು
ನನ್ನ ಗೇಹಿನಿಯೊಲಿದ ಪ್ರಿಯವಸ್ತುವೆಂದರಿತು
ಕಾತರದ ಚೇತನದೆ ಸ್ಮರಿಸುತಿಹೆನು.

೧೭

ಕುರವಕದ ಬೇಲಿಯೊಳಗಿರುವ ಮಾಧವಿಲತೆಯ
ಮಂಡಪದ ಸನಿಹವಿಹ ನುರಗಳಲ್ಲಿ
ಚಲಿಸುತಿಹ ಕಿಸಲಯಗಳೆಸೆವ ರಕ್ತಾಶೋಕ !
ಬಳಿಯೆ ತಾಡಾಜಿಸುವ ಕೇಸರ ತರು !
ನನ್ನಂತೆ ಚಿನ್ನಸುಗ ಕಾತರಿಸುತಿಹುದಲ್ಲಿ
ನಿನ್ನ ಗೆಳತಿಯ ಪಾದುಚರಣಕಳಸಿ
ದೋಹದವ್ಯಾಜದಿಂದೆನ್ನವೊಲು ಬಯಸುತಿಪೆ
ಕೇಸರವು ಸತಿಯ ಮುಖಮದಿರೆಗೆಳಸಿ.

೧೮

ಅವುಗಳೆರಡರ ನಡುವೆ ಅತಿ ಕಠೋರಗಳೆನಿಸ
ದೆಳೆವಿಧಿರ ತೆರನೆನೆವ ಮಣಿಗಳಿಂದೆ
ನಿರ್ಮಿಸಿದ ಮರಕತದ ವೇದಿಕೆಯೊಳೆಸೆಯುತಿದೆ
ಸ್ಫಟಿಕ ಫಲಕದ ಕನಕ ವಾನಯಷ್ಟಿ.
ಸುಭಗಮೆನೆ ದನಿಗೈವ ಕೈಬಳೆಗಳಲುಗುತಿರೆ
ಕರದ ತಾಳಗಳಿಂದಲೆನ್ನ ಕಾಂತೆ
ನಿನಗೆ ಸಮನೆನಿಸಿರುವ ನೀಲಕಂಠನನಲ್ಲಿ
ಸಂಜೆಯಲಿ ತಾ ನಿಂದು ಕುಣಿಸುತಿಹಳು.

೧೯

ಇಂತು ನಾ ಹೇಳಿರುವ ಲಕ್ಷಣಗಳೆಲ್ಲವನು
ನಿನ್ನ ಮನವೊಳು ನೆನೆದು ಹೇ ಸಾಧುವೆ
ಬಾಗಿಲೊಳು ಬರೆದಿರುವ ಶಂಖ ಪದ್ಮಗಳಿಂದೆ
ತಿಳಿದವನು ನನ್ನ ಮನೆಯೆಂದು ಬಗದು
ನನ್ನ ವಿರಹದೊಳಿಂದು ಕಾಂತೆಗುಂದಿ ರವೋಲು
ಇರುವ ಮನೆಯನನೆನ್ನವೆಂದು ನೋಡು
ನೇಸರುದಯಿಸುವಂದು ತಾವರೆಯ ಪೂವರಳಿ
ತನ್ನ ಕಾಂತಿಯನೆಂತು ಹೊಮ್ಮಲಾರದು !

೨೦

ಅಲ್ಲಿ ನೀನಾತುರದೊಳೊಳಮನೆಯ ಪುಗುವಂದು
ಮರಿಯಾಳಿಯಂವನಲಿ ರೂಪನಾಂತು
ಮೊವರೆ ನಾಂ ನೇಳಿದಾ ರಮ್ಯಸಾನುಗಳಿರುವ
ಕ್ರೌಂಚಗಂದಣಿಸೈದ ಶೈಲವೇರಿ
ಖದ್ಯೋತ ಪಂಙ್ಕ್ತಿಗಳ ವಿಲಸಿತಕೆ ಸಮನೆನಿಸಿ-
ದಲ್ಪಾಲ್ಪ ಭಾಸವಂ ಮಿಂಚನೆನೆದು
ವಿದ್ಯುಮನ್ಮೋಹವೆನುವಾಲೋಕದಿಂದೆ ನೀ-
ನೊಳಮನೆಯೊಳೆಲ್ಲವನು ನೋಡಬಹುದು.

೨೧

ತೆಳುಮೆಯ್ಯವೊಗರುಗುವ ನಡುಹರಯದಂಗನೆ
ಸುಲಿಪಲ್ಲ ಸತಿ ಪಕ್ವಬಿಂಬಾಧರೆ
ಚಕಿತಹರಿಣಿಯ ತೆರದಿ ಚಪಲ ನೇತ್ರಾಲೋಕೆ
ನಿಮ್ನನಾಭಿಯ ಸುಂದರಿ ಕೃಶೋದರಿ
ಶ್ರೋಣೀಭರದ ಕತದೆ ಮಂದಗಾಮಿನಿಯಳೆನೆ
ಕುಚಭರದೆ ತಾನೀಷದವನತೆಯೆನೆ
ಅಲ್ಲಿರುವಳೆನ್ನ ಸತಿ ಯುವತಿಯರ ವಿಷಯದಲಿ
ಧಾತೃವಿನ ಮೊದಲನೆಯ ಸೃಷ್ಟಿಯಂತೆ.

೨೨

ಅವಳ ಸಹಚರನೆನಿಸಿದಾನಿಂತು ದೂರವಿರೆ
ಚಕ್ರವಾಕಿಯತೆರದೊಳೊಂಟಿಯಾಗಿ
ಪರಿಮಿತಾಲಾಪೆಯೆನೆ ಕೂರಗುವಬಲೆಯನವಳ
ನನ್ನ ಎರಡನೆ ಜೀವಮೆಂದು ಬಗೆಯೌ
ಗುರುವಿರಹ ಭಾರದಲಿ ನಿಡಿದಾಗಿ ಸಾಗುವೀ
ಮಳೆಯದಿನಗಳಲಾಕೆ ಬೇರೆ ರೂಪಿಂ
ಬಾಲೆ ಗಾಢೋತ್ಕಂಠೆ ಶಿಶಿರ ಪೀಡಿತಳಾದ
ಪದ್ಮಿನಿಯ ತೆರನಿರುವಳೆಂದರಿವೆನು.

೨೩

ಮತ್ತೆಮತ್ತಳುವಂದು ಅಳಲಿನುರುಬೇನೆಯಲಿ
ಊದಿಕೊಂಡಿರುವ ಕಣ್ಣವೆಗಳಿಂದೆ
ನಿಡಿದುಸಿರು ಬಿಡುವಂದು ಅದರ ಸೆಕೆಯುರಿಯಿಂದೆ
ಬಣ್ಣ ಕಳೆಗುಂದಿರುವ ತುಟಿಗಳಿಂದೆ
ಬೊಗಸೆಗೈಗಳಲಾಂತ ಮೊಗದ ಮೇಲಿಂದಿಳಿದ
ಮುಂಗುರುಳು ಮರೆಯಲ್ಲಿ ನಸುತೋರುವ
ತನ್ನ ಇನಿಯಳ ಮೊಗವು ನಿನ್ನ ಉಪಸರಣದೊಳು
ಕಳೆಗುಂದಿದಿಂದುವೊಲು ದೀನಮಹುದು.

೨೪

ನೀನವಳ ನೋಡುವಂದಾಕೆ ತಾನೆಂತಿಹಳೊ
ನಿನ್ನ ಕಣ್ಣಿಗೆ ರಮಣಿ ಬೀಳ್ವಳಿಂತೊ !
ಬಲಿಪೂಜೆಗಳಲಿ ತಾನಾಸಕ್ತಳಾಗಿಹಳೊ
ನೇಮದಲಿ ಸರಕೆಗಳ ಸಲಿಸುತಿಹಳೊ !
ವಿರಹದೊಳು ಕೃಶವಾದ ನನ್ನ ಸಾದೃಶ್ಯವನು
ಭಾವಗೋಚರಮಾಗೆ ಬರೆಯುತಿಹಳೊ !
ಮಧುರವಚನವ ನುಡಿವ ಪಂಜರದ ಶಾರಿಕೆಯ
ಪತಿಯ ನೆನೆವೆಯ ಎಂದು ನುಡಿಸುತಿಹಳೊ !

೨೫

ಮಡದಿ ವೀಣೆಯ ಪಿಡಿದು ಮಲಿನವಸನಮನಾಂತ
ತೊಡೆಯ ಮೇಲದನಿರಿಸಿ ನೇವರಿಸುತೆ
ನನ್ನ ಹೆಸರಿರುವಂತೆ ಪದಗಳನು ಜೋಡಿಸಿದ
ಗೀತೆಯೊಂದನು ನೆನೆದು ಹಾಡಲೆಳಸಿ
ಸುರಿವ ಕಣ್ಣೀರಿನಲಿ ನಾಂದ ತಂತಿಗಳ ತಾ-
ನೆಂತೆಂತೊ ಶ್ರುತಿಗೊಳಿಸಿ ಮತ್ತೆ ಮಿಡಿದು
ತಾನೆ ವಿರಚಿಸಿದ ಪದಮಾವರುಂ ಸಲಸಲಕೆ
ಮೂರ್ಛನೆಯ ಮರೆವವಳ ನೋಡಲಿರುವೆ.

೨೬

ವಿರಹಕಾಲಾವಧಿಯೊಳೆನ್ನುಳಿವುದೆನಿತೆಂದು
ತಿಂಗಳುಗಳೊಂದೊಂದನೆಣಿಸಲೆಂದು
ಹೊಸಿಲ ಮೇಲಿರಿಸಿರುವ ಹೂವುಗಳನೊಂದೊಂದ-
ನಾಯ್ದೆಣಿಸಿ ನೆಲವ ಮೇಲಿಡುತಿರುವಳೊ !
ಮನಸಿನೊಂಮೂಹೆಯಲಿ ಮದನಲೀಲೆಯ ನೆನೆದು
ಸಂಭೋಗಸುಖವನನುಭವಿಸುತಿಹಳೊ !
ರಮಣರಗಲಿರುವಂದು ರಮಣಿಯರಿಗೀ ಬಗೆಯ
ಲೀಲೆಗಳೆ ಮೋದನೋಪಾಯವುತ್ತೆ!

೨೭

ನಿನ್ನ ಸಖನರಸಿ ತಾನೀ ತೆರನೊಳಿರುವಂದು
ವಿರಹ ಪೀಡಿಸದವಳ ಹಗಲಿನಲ್ಲಿ
ಆದುವೆ ರಾತ್ರಿಯ ವೇಳೆ ನಿರ್ಲಿಪ್ತೋದೆಯನವಳ
ಗುರುವಿರಹಭಾತೆಯೆನೆ ಕಂಕಿಸುವೆನು
ನಡುಪಿರುಳಿನೊಳು ನೊಂದು ನಿದ್ರೆ ಬಾರದೆ ಕೊಳಲು
ವನನಿಶಯನೆಯ ಸತಿಯನಾ ಸಾಧ್ವಿಯ
ನನ್ನ ಸಂದೇಶವನು ನುಡಿಮು ಸಲೆ ಸುಖಗೊಳಿಸೆ
ಸದ್ಮವಾತಾಯನದೊಳಿದ್ದು ನೋಡು.

೨೮

ಮನಮರಿಗೆ ಮೈ ಸೊರಗಿ ವಿರಹಶಯನದೊಳೊರಗಿ
ಬಸವಳಿದು ಜೆಂಡಾಗಿ ಒಮ್ಮಗ್ಗಲಾಗಿ
ಮೂಡಲಿನ ಮೂಲದಲಿ ಒಂದೆ ಕಳೆಯುಳಿದಿರುವ
ತಂಗದಿರನಂದದಲಿ ದೀನಳಾಗಿ
ನನ್ನೊಡನೆ ಮನತುಂಬಿ ರತಿಸುಖವನನುಭವಿಸಿ
ಕ್ಷಣದವೊಲು ಕಳೆದಂಧ ರಾತ್ರಿಯವನು
ವಿರಹದಿಂದತಿ ದೀರ್ಘಮಾಮವೆಸೆ ಭಾವಿಸುತೆ
ಬಿಸಿಯ ಕಣ್ಣೀರಿನಲಿ ಕಳೆಯುತಿಹಳು.

೨೯

ಜಾಲಮಾರ್ಗದಿನಿಳಿವ ಅಮೃತಶೀತಲಮೆನಿಸಿ
ದಿಂದುವಿನ ಕಿರಣಗಳನೆಂದಿನಂತೆ
ಆನಂದವಹುದೆಂದು ಅರ್ತಿಯಿಂದೀಕ್ಷಿಸುತೆ
ಒಡನೆ ಕಡುಖೇದದಿಂ ಕಣ್ಣಿರುಕ್ಕುತೆ
ಕಂಬನಿಯ ಭಾರದಲಿ ತೂಯ್ದು ಎವೆಗಳ ಮುಚ್ಚಿ
ಮೋಡವಾವರಿಸಿರುವ ಮುಳಿಯ ದಿನದ
ತೆರೆದು ತೆರೆಯದಪೋಲು ತೋರ್ಪ ನೆಲದಾವರೆಯ
ತೆರನಿರುವ ಸತಿಯ ನೀಂ ನೋಡಲಿರುವೆ.

೩೦

ಬರಿನೀರ ಮೀಸದಿಂದತಿ ಪರುಷಮಾಗಿರುವ
ಮುಂಗುರುಳು, ಕೆನ್ನೆವರಮಿಳಿದು ಬರಲು
ಅಧರ ಕಿಸಲಯಗಳನು ಮಲಿನಗೊಳಿಸುತಲಿರುವ
ಬಿಸಿಯುಸಿರಿನಿಂದಲವನೋಸರಿಸುತೆ
ನುರಿವ ಕಣ್ಣೀರಿನಲಿ ನಿದ್ರಾವಕಾಶವಿನಿ
ಸಿಲ್ಲವೆಂದರಿತರೂ ಅದನೆ ಬಯಸಿ
ಕನಸಿನೊಳಗಾದರೂ ನನ್ನ ಸಂದರ್ಶನವ
ಪಡೆವುದೆಂದೆಂದವಳು ಚಿಂತಿಸುವಳು.

೩೧

ವಿರಹದಿವಸದ ಮೊದಲೆ ಆಕೆ ಹಾರವನುಳಿದು
ಆವ ಹೆರಳನು ತೆಗೆದು ಶಿಖೆಗೈದಳೊ
ಶಾಪ ಕೊನೆಗೊಂಡಂದು ಶೋಕವಿಗಳಿತನಾಗಿ
ಆವ ಶಿಖೆಯನು ನಾನು ಬಿಡಿಸಲಿಹೆನೊ
ಸಿಕ್ಕಾಗಿ ಜಡೆಗಟ್ಟಿ ಸೋಂಕಿದರೆ ಬಿರುಸಾಗಿ
ಜಗುಳಿ ಕದಪಿನ ಮೇಲೆ ಕವಿಯುತಿರುವ
ಏಕವೇಣಿಯನದನು ಅಯಮಿತನಖಂಗಳಿಂ-
ದೆಳೆದೆಳೆದು ತೆಗವವಳ ನೋಡಲಿರುವೆ.

೩೨

ಅಬಲೆ ಮನದಳಲಿನಿಂಮೊಡವೆಗಳನೆಲ್ಲವನು
ಕಳಚಿಟ್ಟು ಕೃಶಳಾಗಿ ಬಳಲಿ ಬೆಂಮು
ವಿರಹರಮ್ಯೆಯ ಮೇಲೆ ಸಲಸಲಕೆ ಹೊರಳುವಳ
ಕೋಮಲಾಂಗಿಯನಿರವೆ ನೋಡಿದಂದು
ನೀನುಮಾಳೆಯ ಇರವಿಗೆವೆಗರಗಿ ಹೊಸನುಳೆಯ
ರೂಪವಲಿ ಕಣ್ಣೀರು ಕರೆಯಲಿರುವೆ
ಆರ್ದ್ರಾಂತರಾತ್ಮನೆಂದೆನಿಸಿರುವ ಸರ್ವರೂ
ಕಾರುಣ್ಯ ವೃತ್ತಿಯನು ತೋರ್ಪರಲ್ತೆ.

೩೩

ನಿನ್ನ ಗೆಳತಿಯ ಮನವು ಕಟ್ಟೊಲ್ಮೆಯೆರಕದಿಂ-
ದೆನ್ನೊಳನುರಕ್ತವೆಂದರಿತಿರುವೆನು.
ಅದರಿಂದಲಿಂದಾನು ಇದೆ ಮೊದಲ ವಿರಹದೊಳು
ಅವಳನಿಂತಿರುವಳೆಂದೂಹಿಸಿಹೆನು.
ಸುಭಗನಾನೆಂದೆನುವ ಬರಿಹೆಮ್ಮೆಯಿಂದೇನು
ಮಾತಾಳಿಯಂದದಲಿ ಬಣ್ಣಿಸಿದೆನೆ!
ಸೋದರನೆ ನಾನಿಂದು ಹೇಳಿರುವುದೆಲ್ಲಮುಂ
ಶೀಘ್ರದೊಳೆ ನಿನಗೆ ಪ್ರತ್ಯಕ್ಷಮಹುದು.

೩೪

ಮೊಗದ ಮೇಲಿಂದಿಳಿದು ಮುಂಗುರುಳು ಕವಿಯುತಿರೆ
ಕಡೆಸೋಟ ಪಸರಿಸದ ಮನುಕಾಗಿರೆ
ಮಧುವ ಸೇವಿಸದಿರಲು ಭ್ರೂವಿಲಾಸಗಳಿರದೆ
ಕಾಡಿಗೆಯ ನುಣ್ಪಳಿಯೆ ಕಳೆಗುಂದಿರೆ
ನೀನು ಬಳಗೈದುವರೆ ಹಾರಿ ನಸುಚಲಿಸುತಿರೆ
ಆ ಮೃಗಾಕ್ಷಿಯ ವಾಮನಯನವದನು
ಮೀನ ಚಾಲನವಡೆದ ಕುವಲಯಶ್ರೀಯೊಂದು
ಸಾಮ್ಯವನು ಪಡೆದುದೆಂದೂಹಿಸುವೆನು.

೩೫

ವಿಧಿವಶದೊಳಿಂದವಳನಗಲಿ ನಾಂ ದೂರವಿರೆ
ನನ್ನ ಬೆರಳುಗುರುಗಳ ಕಲೆಗಳಳಿಸಿ
ಚಿರಕಾಲದಿಂದಾಕ ತಳದ ಮಣಿಹಾರವನು
ದೈವಗತಿಯಿಂದದನುಮಂತೆ ತ್ಯಜಿಸಿ
ಕೂಟದಾಯಾಸವನು ಪರಿಹರಿಸಲೆಂದಾನು
ಕೈಗಳಿಂದೊತ್ತುವುದಕರ್ಹವೆನಿಸಿ
ಬೆಳೆದ ಬಾಳೆಯ ದಿಂಡಿನಂತೆ ಬೆಳ್ಪಿಸೊಳೆಸವ
ನನ್ನವಳ ವಾಮೋರು ನಸುಚಲಿಪುದು.

೩೬

ಜಲದ ಹೇಳುವೆ ಕೇಳು ನೀನು ಹೋಗುವ ವೇಳೆ
ಮಲಗಿ ಜೊಂಪಿನೊಳಿರಲು ನನ್ನ ಸತಿಯು
ಸನಿಹದೊಳೆ ಕುಳ್ಳರ್ದು ನೀನವಳನನುಸರಿಸಿ
ಯಾಮಮಾತ್ರಂ ನಹಿನು ಮೊಳಗನುಳಿದು.
ತನ್ನ ಕನಸಿನೊಳಿರವೆ ಮನದಾಣ್ಮನೆನ್ನನೆಂ-
ತೋ ಪಡೆದು ಬಿಗಿದಪ್ಪಿ ನಲಿಯುತಿರಲು
ನನ್ನ ಕೊರಳನು ಸುತ್ತಿ ಬಿಗಿದ ಅವಳಪ್ಪುಗೆಯ
ಬಳ್ಳಿದೋಳಿನ ತೆಕ್ಕೆ ಜಾರದಿರಲಿ.

೩೭

ಹೊಚ್ಚಹೊಸ ಮಾಲತಿಯ ಬಿರಿಮುಗುಳಿನೊಡನೊಡನೆ
ತಾನುಮಂತಸ್ತಾಪಶಮನೆಯಾಗೆ
ನಿನ್ನ ನೀರಿನ ಹನಿಯ ತಂವೇರಿವೆಲರಿನಿಂ
ಮೃದುವಾಗಿ ಸುಳಿದವಳನೆಚ್ಚರಿಸಲು
ಸನ್ಮಿತಾತಾಯಸವೆ ನಿಶ್ಚಲಾಕ್ಷಿಯನಿರಿಸಿ
ನೋಳ್ಪ ಮಾನಿನಿಯವಳ ನುಡಿಸಲೆಳಸಿ
ಮಿಂಚವೆಯೆ ಮುನ್ನಿಂತು ಧೈರ್ಯದಲಿ ನೀನಿಂತು
ಮೊಳಗುಗಳ ಮಾತುಗಳನಾರಂಭಿಸು.

೩೮

ಭರ್ತೃವಿನ ಮಿತ್ರನುಂ ಪ್ರಿಯನುಮಾವಂಬುವಾ-
ಹನನೆಂದು ತಿಳಿಯೆನ್ನ ಮುತ್ತೈದೆಯೆ !
ಅನನ ಸಂದೇಶವನು ನನ್ನ ಮನಮೊಳಗಿರಿಸಿ
ಬಳಿಗೆ ಬಂದಿರುವೆನೆಂದೆನ್ನರಿಯೌ !
ಅಬಲೆಯರ ಜಡೆಮುಡಿಯ ಬಿಡಿಸಲಾತುರರಾಗಿ
ದಾರಿಯಲಿ ತೊಳಲುವಾ ವಿರಹಿಗಳನು
ಮೃದುಮಧುರವಾಗಿರುವ ಮೊಳಗುಗಳ ಘೋಷದಿಂ-
ದಿರದೆ ತ್ವರೆಗೊಳಿಸುವಾ ಮುಗಿಲೆ ನಾನು.

೩೯

ಇಂತು ನೀನುಸುರುತಿರೆ ಪವನತನಯನ ಕಂಡ
ಮೈಥಿಲಿಯಲ್ಲೋಲಾಕೆ ಮೊಗವನೆತ್ತಿ
ಉತ್ಕಂಠವರದಿಂವಲುತ್ಫುಸಿತ ಹೃದಯಳಿನಿ
ನಿನ್ನ ವೀಕ್ಷಿಸಿ ಸೊಗವೆ ಸಂಭಾವಿಸಿ
ಏಕೈಕಭಾವದಲಿ ಕೇಳುವಳವೆಲ್ಲವನು
ಪತಿಯ ನೇಹಿಗನೆಂಮ ಪರಿಭಾವಿಸಿ.
ಸ್ನೇಹಿತರು ತಿಳಿಸುವಾ ಪತಿಯ ಕುಶಲವ ವಾರ್ತೆ
ಸಂಗಮದ ಸುಖಕಿಂತ ಕಿಂಚಿನೂನಂ.

೪೦

ನನ್ನ ವಚನವ ವಲಿಸಿ ನೀನುಮುಸಕ್ಕತನಿನಿಸಿ
ಆಕೆಯೊಡನಿಂತುಸಿರು ನಿರ್ಧಾಯುನೆ !
ಅಬಲೆ ನಿನ್ನಿಂವಗಲಿವಳಲಿನುರು ಜೀನೆಯಲ
ರಾಮಗಿರ್ಯಾಶ್ರಮಂಗಳಲಿ ನೆಲಸಿ
ಉಸಿರು ಒಡಮುಳಿರುವ ನಿನ್ನ ಸಹಚರನಂಮ
ಕುಶಲನೇ ನೀನೆಂಮ ಕೇಳುತಿಹನು.
ಸುಲಭಮೊಗಲನಂಧ ಜೀವಿಗಳ ಬೆಸಗೊಳ್ವು-
ಡೀ ಬಗೆಯ ಮುನ್ನುಡಿಯೆ ಉಚಿತಮಲ್ತೆ !

೪೧

ತನ್ನ ಮಾರ್ಗನ ತಡೆದು ತನಗೆ ವೈರಿ ನಿಲಿರುವ
ವಿಧಿವರವೆ ಮೂರಖಿಸ ನಿನ್ನ ಪತಿಯು
ತೆಳುವಾಗಿ, ಕಡುತಾವನಲಿ ಬೆಂಮು, ನಿಡಿಮುಸಿರು
ಬಿಡುತೆ, ಕಣ್ಣೀವನಲ ನಾಂದು ಸೊಂಮು ;
ಬಿಸಿಯುಸಿರು ಬಿಡುತಿರುವ ಸಂತಾಸಗೊಳುತಿರುವ
ಕಡುಸೊಂಮ ಕಂಬನಿಯ ಕವೆಯುತಿರುವ
ಬಡವಾಗಿ ಸೊರಗಿರುವ ನಿನ್ನಂಗ ಸಂಗವನು
ತನ್ನ ಮನವೆಣಿಕೆಯೊಳೆ ಪ್ರೇಮುತಿಹನು.

೪೨

ನೆರೆದ ಸಖಿಯರ ಇದಿರೊಳಿರುವ ನಿನ್ನನು ನೋಡಿ
ಮೊಗಕೆ ಮುತ್ತಿಡುವೆಂದು ಆಸೆಯಿಂದೆ
ಎಲ್ಲರುಂ ಕೇಳ್ವಂತೆ ನೇಳ್ವ ಮಾತಾವರುಂ
ಕಿವಿಯೊಳುಸುರಲು ಬಯಸಿದಂಥ ಸತಿಯು
ಶ್ರವಣವಿಷಯವ ಮೀರಿ ಲೋಚನಾತೀತನೆನೆ
ದೂರದೇಶದೊಳಿಂದು ನಿಂತನೆಂದೆ
ನಿನ್ನೊಂದು ಮಮತೆಯಲಿ ಹೆಣೆದು ಸೇರಿಸಿದಂಥ
ಪದವಿದನು ವೇಳ್ದ ನಿಂತೆನ್ನ ಮುಖವೆ.

೪೩

ಶ್ಯಾಮಾಲತಾವಳಿಯೊಳಂಗಮೊಂದಂದವನು
ಮೊಗವೊಂದು ಕಾಂತಿಯನು ಚಂದಿರನೊಳು
ಚಕಿತವನಪರಿಣಿಯಾಲೋಕನದೆ ನೋಟವನು
ತೆಳ್ವೊಳೆಯ ಅಲೆಗಳಲಿ ಹುಬ್ಬಿನೊಲವ
ಶಿಖಿಕಲಾಪಂಗಳಲಿ ಕುರುಳ ಸೌಂದರ್ಯವನು
ನೋಡಿ ನಿನ್ನಂದವನು ಪರಿಭಾವಿಸಿ
ಒಂದೆಡೆಯೊಳಾವರುಂ ನಿನ್ನ ಸಾದೃಶ್ಯವನು
ಕಾಣದೆಯೆ ಕೊರಗುತಿಹೆನೆಲೆ ಚಂಡಿಯೆ.

೪೪

ಹೊಸಮಳೆಯ ನೀರಿನಲಿ ನಾಂದಿರುವ ನೆಲದಂತೆ
ಹೊಸದೊಂದು ಕಂಪ್ಪುಗುವ ನಿನ್ನ ಮೊಗಕೆ
ದೂರವಿರುವುದರಿಂದೆ ಕೃಶನಾಗಿ ನಮೆವೆನ್ನ
ಪಂಚಬಾಣನುಮಿರವೆ ಪೀಡಿಸುವನು.
ವರ್ಷಋತುವಿನೊಳಿಂದು ವೆಸವೆಸೆಯನಾವರಿಸಿ
ಸಾಂದ್ರಮೆನೆ ಕವಿದಿರುವ ಮೋಡದಿಂದೆ
ಅವ್ಯಕ್ತನಾಗಿರುವ ಸೂರ್ಯನಾತಪವಿರುವ
ದಿವಸಗಳನಿನ್ನೆಂತು ಕಳೆವುದಬಲೆ.

೪೫

ಧಾತುರಾಗಗಳಿಂದೆ ಗಿರಿಯ ಶಿಲೆಗಳ ಮೇಲೆ
ಪ್ರಣಯಕುಪಿತಳ್ಪೋಲು ನಿನ್ನ ಬರೆದು
ನಿನ್ನ ಚರಣಾಗ್ರದಲಿ ಕೆಡೆದವನಪ್ಪೋಲೆನ್ನ
ಬಗೆಯಲೆಂದಾತಿಸಿದ ಆ ಕ್ಷಣದೊಳೆ
ಸಲಸಲಕೆ ಉರುಳಿ ಬರುವಶ್ರುಬಿಂದುಗಳಿಂದ
ಕಣ್ಣು ಸನಿಗೂಡುವುದು ನೋಟ ಮಸುಳೆ.
ಘಾತುಕ ಕೃತಾಂತನಾ ಚಿತ್ರದೊಳಗಾವರುಂ
ನಮ್ಮೊಂದು ಸಂಗವನು ಸಹಿಸನಲ್ತೆ !

೪೬

ಸ್ವಪ್ನಸಂದರ್ಶನದೊಳತಿಕಷ್ಟದಿಂದಾನು
ನಿನ್ನ ಸಹವಾಸನನು ಹೊಂದಿದಂದು
ನಿನ್ನ ಬಿಗಿದಪ್ಪುಗೆಯೊಂದಾನೆಯಿಂದಾಗಸಕೆ
ಉಪ್ಪೇಗವಶನಾಗಿ ತೋಳನೆಸೆಯೆ
ಮತ್ತೆ ಮತ್ತೆನ್ನನಿಂತೀ ಸ್ಥಿತಿಯೊಳೀಕ್ಷಿಸುತೆ
ಬಳಿಯ ವನದೇವತೆಗಳಿನಿಗೆ ಮರುಗಿ
ಮರವ ಚಿಗುರೆಲೆ ಮೇಲೆ ತೋರಮುತ್ತಿನ ತೆರನ
ಕಣ್ಣೀರ ಹನಿಗಳನು ಸುರಿಸದಿಹರೆ !

೪೭

ದೇವದಾರುದ್ರುಮದ ಕಿಸಲಯದ ಕೊಸೆಮುರಿದು
ಸುರಿವಪರ ಹಾಲಿನೊಡವೆಗೆದು ಬಂದು
ಅಮವೆ ಸೌರಭವೆರಸಿ ಆ ಹಿಮಾಚಲದಿಂದೆ
ದಕ್ಷಿಣಕೆ ಬೀಸುತಿರೆ ತಂಗಾಳಿಯು
ಕಲ್ಯಾಣಗುಣವತಿಯೆ ಮೊದಲು ನಿನ್ನಂಗವನು
ಸೋಂಕಿ ಬಳಿಕೀಯೆಡೆಗೆ ಬೀಸಿತೆಂದು
ಮನದೊಳಾಲೋಚಿಸುತಲಾನು ಮೈಯಾನುವೆನು
ಆಗಲಿಕೆಯ ಅಳಲಿನುರಿ ನೀಗಲೆಂದು.

೪೮

ದೀರ್ಘಯಾಮಗಳಿಂದಲುರುಳುತಿರುವೀ ರಾತ್ರಿ
ಕ್ಷಣದಂತೆ ಲಘುವೆನಿಸಿ ತೋರ್ಪುದೆಂತು!
ಅಂತೆ ಉರಿವೀ ಹಗಲುಮೆಲ್ಲ ವೇಳೆಯೊಳೆನಗೆ
ಮಂದಮಂದಾತಪದೊಳಿರ್ಪುದೆಂತು!
ಇಂತು ದುರ್ಲಭಮಾದ ಕಾಮನೆಗಳಿಂದೆನ್ನ
ತಪ್ತಚೇತನವಿಂದು ಚಟುಲನಯನೆ!
ನಿನ್ನನಗಲಿದ ವ್ಯಥೆಯ ದಾರುಣಾವಸ್ಥೆಯಲಿ
ಕೊರಗುತಿದೆ ಶರಣರಿನ್ನಿಲ್ಲನೆಂದು.

೪೯

ಬಹುವಿಧದೆ ಚಿಂತಿಸುತೆ ನಾನೆ ನನ್ನಾತ್ಮವನು
ಸಂತವಿಸಿ ಜೀವವನು ಧರಿಸಿರುವೆನು.
ನನ್ನ ಕುಶಲವ ಕೇಳಿ ಇನ್ನಾದರೂ ನೀನು
ಕಾತರಂಗೊಳ್ಳದಿರು ಕಲ್ಯಾಣಿಯೆ!
ಅತ್ಯಂತ ಸುಖವಿರುವುದಾರಿಗೀ ಲೋಕದಲಿ
ಅತ್ಯಂತ ದುಃಖವಿನ್ನಾರಿಗಿಹುದು.
ಒಂದಾವ ಮೇಲೊಂದು ಸುಖದುಃಖಗಳು ಬಂದು
ಚಕ್ರನೇಮಿಕ್ರಮದೆ ಸ್ಮರಿಸುತಿಹವು.

೫೦

ಶಾಪ ಕೊನೆಗೊಳ್ಳುವುದು ಶಾರ್ಙ್ಗವಾಣಿಯು ತಾನು
ಭುಜಗಶಯನನವನುಳಿದು ಏಳುವಂದು.
ಉಳಿದ ನಾಲ್ದಿಂಗಳನು ಕಣ್ಮುಚ್ಚಿ ಕಳೆಯಬಲೆ
ಬಳಿಕ ನಾವೀರ್ವರೂ ಒಂದುಗೂಡಿ
ಶಾರದಾಕಾಶದಿಂದಿಳಿವ ಬೆಳ್ದಿಂಗಳಲಿ
ರಮಣೀಯಮೆನಲೆಸೆವ ರಾತ್ರಿಗಳಲಿ
ವಿರಹದೊಳು ಗುಣಿಸಿರುವ ನಂನಂಮ ಕಾಮಗಳ
ಮನವಾರೆ ಸವಿಯುವಂ ಮೋದದಿಂದೆ.

೫೧

ಹಿಂದೊಮ್ಮೆ ಹಾಸಿನಲಿ ನನ್ನೊಡನೆ ನೀಂ ಮಲಗಿ
ನಿದ್ರಿಸಿದ ವೇಳೆಯಲಿ ಕೊರಳನಪ್ಪಿ
ನಿದ್ರೆಯೊಳೆ ನೀನೇಕೊ ಕೂಗಿ ರೋದಿಸುತಿರಲು
ಏನು ಕಾರಣವೆಂದು ನಿನ್ನನಂದು
ಬಹುವಿಧದೆ ಬೆಸಗೊಳ್ಳೆ ನನ್ನೊಡನೆ "ಯೇ ತವ
ನೀನು ಮತ್ತಾವಕನೊ ರಮಿಸಿದಂತೆ
ಕನನಾದುವನಗೆಂದು" ಮೊಗವ ಮುಂದಿಸ್ಮಿತಮೊ-
ಳೆಂದುದನು ಮತ್ತಿಂದು ನೆನೆದನನು.

೫೨

ಇಂತಭಿಜ್ಞಾನವನು ಕರುಣಿಸಿದ ಕಾರಣದೆ
ನನ್ನ ಕುಶಲವನರಿತು ಅಸಿತನಯನೆ!
ಲೋಕವಾರ್ತೆಯ ನಂಬಿ ನನ್ನೊಳಸಿಮುತ್ತದಿಂ
ನೀನವಿಶ್ವಾಸಿನಿಯಳೆನಬೇಡ!
ಸ್ನೇಹಧರ್ಮಗಳೆಂತೂ ವಿರಹಕಾಲದೊಳಿರದೆ
ನಲಿಸಿಹೋಗುವುದೆಂದು ನೀನರಿತಿಹರು.
ಭೋಗದ ಅಭಾವದಿಂದಿಷ್ಟವಿಷಯಂಗಳಲಿ
ರಸವುಕ್ಕಿ ಬೆಳೆವುದೌ ಪ್ರೇಮರಾಶಿ.

೫೩

ಪ್ರಥಮವಿರಹಮೂರ್ಛಿತಕೋಕಿಲಾಲಾವ
ನಿನ್ನ ಸಖಿಯನು ಇಂತು ಸಂತವಿಸುತೆ
ವಿಷಮನೇತ್ರನ ವೃಷಭನಗದ ಶಿಖರಗಳಿರುವ
ಕೈಲಾಸದಿಂದೊಡನೆ ಹಿಂದಿರುಗುತೆ
ಆಕೆ ಕುರುಹುಗಳೊಡನೆ ಹೇಳಿಕಳುಹಿಸಿದಂಥ
ತನ್ನ ಕುಶಲವ ನುಡಿಯ ನನ್ನೊಳುಸುರಿ
ಉದಯಕಾಲವ ಕುಂದುದರಳಂತೆ ಜಗುಳುತಿರು-
ವೆನ್ನ ಜೀವಿತವಿದನು ಬಂದುಳುಹಿಸು.

೫೪

ನಿನಗೆ ಸಖನಹ ನನ್ನ ಈಯೊಂದನೇಕ್ಷೆಯನು
ಕೈಕೊಂಡು ಸಲಿಪೆಯೆಂದಾಶಿಸುವೆನು.
ನಿನ್ನ ಪ್ರತ್ಯಾದೇಶವೊಂದರಿಂದಲೆ ನಾನು
ಕಲ್ಪಿಸೆನು ಧೀರತೆಯ ನಿನ್ನೊಳೆಂದುಂ.
ನಿಶ್ಶಬ್ದನಾಗಿ ನೀಂ ಮಾರುತ್ತರಂಗುಡದೆ
ಯಾಚಿಸುವ ಚಾತಕಕೆ ನೀರನೆರೆವೆ
ಸತ್ಪುರುಷರಾದರಿಗೆ ಈಪ್ಸಿತಾರ್ಥಕ್ರಿಯೆಯೆ
ಪ್ರತ್ಯುತ್ತರಂ ಅಲ್ತೆ ಪ್ರಣಯಿಗಳಲಿ.

೫೫

ಗೆಳೆಯನಿವನೆಂದೆನುವ ಸೌಹಾರ್ದಭಾವದಿಂ-
ದಲ್ಲದಿರೆ ವಿಧುರನೆಂದೆನುವ ಕತವೆ
ಕನಿಕರದೊಳೆಸಗು ನೀನೆನ್ನ ಪ್ರಿಯಕಾರ್ಯವನು
ಅನುಚಿತವಿದೆಂಬುದನು ಪರಿಗಣಿಸದೆ.
ಇಷ್ಟಮಾದೆಡೆಗಳಲಿ ಬಳಿಕ ನೀಂ ಸಂಚರಿಸು
ವರ್ಷಋತು ಸಂಭೃತಶ್ರೀಕನಾಗಿ.
ಕ್ಷಣಕಾಲಮಾನವರುಂ ವಿದ್ಯುತ್ಕಳತ್ರದಿಂ
ನಿನಗಿಂಥ ವಿರಹ ಸಂಘಟಿಸದಿರಲಿ.

ಕೆಲವು ಹೊಸ ಪ್ರಕಟನೆಗಳು

ಪ್ರೊ. ಕೃಷ್ಣಶಾಸ್ತ್ರೀ, ಎ.ಆರ್.

ವಚನ ಭಾರತ (ಎರಡನೆಯ ಮುದ್ರಣ)	೬	೮	೦
ಕಥಾಮೃತ	೭	೮	೦
ಭಾಸಕವಿ	೨	೮	೦
ಕವಿ ಜಿಹ್ವಾಬಂಧ	೦	೧೨	೦

ಪ್ರೊ. ಶ್ರೀಕಂಠಯ್ಯ, ಶೀ.ನಂ.

ಒಲುಮೆ	೧	೮	೦

ಶ್ರೀ ನರಸಿಂಹಾಚಾರ್, ಪು.ತಿ.

ರಸ ಸರಸ್ವತಿ	೧	೮	೦

ಡಾ|| ಕೃಷ್ಣಮೂರ್ತಿ, ಕೆ.

ಕನ್ನಡ ಧ್ವನ್ಯಾಲೋಕ	೫	೦	೦
ಕನ್ನಡ ಕಾವ್ಯಾಲಂಕಾರ (ಅಚ್ಚಿನಲ್ಲಿ)			
ಪ್ರತಿಮಾ ನಾಟಕ (,,)			

ಶ್ರೀ ಪರಮೇಶ್ವರಭಟ್ಟ, ಎಸ್.ವಿ.

ಕನ್ನಡ ಕುಮಾರಸಂಭವ	೨	೮	೦
ಪ್ರೇಮಾರಾಧನ	೨	೦	೦
ಕನ್ನಡ ಮೇಘದೂತ	೧	೦	೦

ಶ್ರೀ ಕೃಷ್ಣಮೂರ್ತಿ, ಎ.

ಪಾಂಪೆಯ ಕೊನೆಯ ದಿನಗಳು	೧	೮	೦

ಶ್ರೀ ಸುಬ್ಬರಾವ್, ತ.ರಾ.

ರಕ್ತರಾತ್ರಿ	೨	೦	೦

ವಿವರಗಳಿಗೆ ಬರೆಯಿರಿ :—

ಶಾರದಾ ಮಂದಿರ

೫೭೮ ಕೃಷ್ಣರಾಜವನಂ, ಮೈಸೂರು